ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 44-45 | ನವೆಂಬರ್ 4, 1984 | ಬೆಲೆ 60 ಪೈಸೆ.

೨೯ ನೆಯ ಕರ್ನಾಟಕದ ರಾಜ್ಯೋತ್ಸವ

ನಮ್ಮ ಕರ್ತವ್ಯ

ಅಮೇರಿಕನ್ ಸಾಮ್ರಾಜ್ಯ ಶಾಹಿಯ ಷಡ್ ಯಂತ್ರದ ಫಲವಾಗಿ ನಮ್ಮ ರಾಷ್ಟ್ರದ ಪ್ರಧಾನಿ ಇಂದಿರಾ ಗಾಂಧಿಯವರು ಹತವಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯೋತ್ಸವದ ಸಡಗರಗಳು ಮರೆಯಾಗಬೇಕಾಯಿತು. ಭಾರತವನ್ನು ದುರ್ಬಲಗೊಳಿಸಲು ನಿರಂತರವಾಗಿ ಪ್ರಯತ್ನಿಸುತ್ತಿರುವ ಸಾಮ್ರಾಜ್ಯಶಾಹಿಗಳ ಕೈವಾಡಕ್ಕೂ "ಉದಯವಾಯಿತು. ನಮ್ಮ ಚೆಲುವ ಕನ್ನಡ ನಾಡು, ಬದುಕು ಬಲುಹಿನ ಸಿರಿಯು ಸದಭಿಮಾನದ ಗೂಡು" ಎಂಬ ಹಾಡಿನೊಂದಿಗೆ ಉದಯವಾದ ಕನ್ನಡನಾಡಿನ ಬದುಕು ಅಭ್ಯುದಯಕ್ಕೂ ನೇರವಾದ ಸಂಬಂಧವಿದೆಂಬುದನ್ನು ತಿಳಿಯುವುದಗತ್ಯ. ಈ ಸಾಮ್ರಾಜ್ಯ ಶಾಹಿಗಳು ಯಾವ ವಿಚ್ಛಿದ್ರಕಾರಿಶಕ್ತಿಗಳಿಗೆ ಉತ್ತೇಜನ ನೀಡುವ ಮೂಲಕ ನಮ್ಮ ರಾಷ್ಟ್ರವನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದ್ದಾರೋ, ಯಾವ ಛಿದ್ರಕಾರಿ ಶಕ್ತಿಗಳ ಮೂಲಕ ಇಂದಿರಾಗಾಂಧಿಯ ಕೊಲೆಮಾಡಲಾಯಿತೋ ಆ ಶಕ್ತಿಗಳ ಹುಟ್ಟು, ಬೆಳವಣಿಗೆಗಳಿಗೂ ದೇಶದ ಸಮಗ್ರತೆಗೂ, ಕರ್ನಾಟಕದಂಥ ಎಲ್ಲ ರಾಜ್ಯಗಳಿಗೂ, ಅವುಗಳ ಬೆಳವಣಿಗೆಗೂ ನೇರ ಸಂಬಂಧವಿದೆ.

ಅಂತರಷ್ಟ್ರೀಯಬಂಡವಾಳಶಾಹಿದೇಶಗಳಲ್ಲಿಆಳವಾಗುತ್ತಿರುವ ಬಿಕ್ಕಟ್ಟಿನ ಫಲವಾಗಿ ಸಾಮ್ರಾಜ್ಯಶಾಹಿದೇಶಗಳು ತಂತಮ್ಮೊಳಗೆ ತೀವ್ರಸ್ಪರ್ಧೆ ನಡೆಸುತ್ತಿದ್ದಾರೆ. ಸಮಾಜವಾದಿ ದೇಶಗಳನ್ನು ನಾಶ ಮಾಡಲು ಮೂರನೇ ಮಹಾ ಯುದ್ಧದ ತಯಾರಿ ನಡೆದಿದೆ. ಸಾಧ್ಯವಾದ ಕಡೆಗಳಲ್ಲೆಲ್ಲಾ ಕೈಗೊಂಬೆ ಸರಕಾರಗಳನ್ನು ನಿರ್ಮಿಸಲಾಗುತ್ತಿದೆ. ಅವುಗಳಿಗೆಲ್ಲ ಶಸ್ತ್ರಾಸ್ತ್ರ ಹಣ ಸಹಾಯ ನೀಡಿ ಸಾಧ್ಯವಾದಲೆಲ್ಲ ಅಸ್ಥಿರ ಪರಿಸ್ಥಿತಿಯನ್ನುಂಟು ಮಾಡಲಾಗುತ್ತಿದೆ. ಭಾರತ ದೇಶವನ್ನೂ ತನ್ನ ಕೈಗೊಂಬೆಯಾಗಿ ಮಾಡಿಕೊಳ್ಳುವಲ್ಲಿ ವಿಫಲಗೊಂಡ ಅಮೇರಿಕನ್ ಸಾಮ್ರಾಜ್ಯಶಾಹಿ ನೆರೆ ರಾಷ್ಟ್ರಗಳಿಗೆ ಆಧುನಿಕ ಶಸ್ತ್ರಾಸ್ತ್ರ ಅಪಾರ ಹಣದ ಸಹಾಯ ಮಾಡುತ್ತಿರುವುದಷ್ಟೇ ಅಲ್ಲ, ವಿಚ್ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಿ ದೇಶದ ಐಕ್ಯತೆಯನ್ನು ಶಿಥಿಲ ಗೊಳಿಸುವ ಪ್ರಯತ್ನ ನಡೆಸಿದ್ದಾರೆ. ಅಸ್ಸಾಂ, ಪಂಜಾಬ್, ಮಿಜೋರಾಂ ಮೊದಲಾದ ಸಮಸ್ಯೆಗಳಿಗೆಲ್ಲ ಇವರೇ ಕಾರಣ.

ಇಂಥ ಸಮಸ್ಯೆಗಳನ್ನೆದುರಿಸಲು ಬಲವಾದ ಕೇಂದ್ರ ಬೇಕೆಂಬ ವಾದವನ್ನು ಮುಂದೆ ಮಾಡಿ, ಕೇಂದ್ರ - ರಾಜ್ಯಗಳ ಸಂಬಂಧವನ್ನು ಹಾಳು ಕೆಡವಿ, ವಿಚ್ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ನಮ್ಮ ಕೇಂದ್ರ ಸರಕಾರದಿಂದ, ಕೇಂದ್ರ ಸರಕಾರದ ಅಸಮರ್ಪಕ ರಾಜಕೀಯ—ಆರ್ಥಿಕ ನೀತಿಯಿಂದಾಗಿ, ಭಾರತವನ್ನು ನಿಶ್ಯಕ್ತಗೊಳಿಸುವ, ಛಿದ್ರಗೊಳಿಸುವ ಅಮೇರಿಕದ, ಕ್ರಿಶ್ಚನ್ ಮೆಶಿನರಿಗಳ ಕುಯುಕ್ತಿಗೆ ಸಹಾಯ ಮಾಡಿದಂತಾಗಿದೆ. ಈ ಕಾರಣದಿಂದಾಗಿಯೇ ಈಶಾನ್ಯ-ನೈಋತ್ಯ ಭಾಗಗಳಲ್ಲಿ ದೇಶದ್ರೋಹಿ, ಕೃತಿಗಳು ಹೆಚ್ಚಾಗುತ್ತಿವೆ. ಅಪಾಯಕಾರಿಯಾಗಿ ಬೆಳೆದು ಬರುತ್ತಿವೆ. ನಮ್ಮ ರಾಜ್ಯದಲ್ಲಿಯೂ ಕ್ರಿಶ್ಚನ್ ಮೆಶಿನರಿಗಳು ನಾನಾ ರೂಪಗಳಲ್ಲಿ ಗ್ರಾಮಾಂತ ಪ್ರದೇಶದಲ್ಲಿರುವ ಕೃಷಿ ಕಾರ್ಮಿಕರ, ದಲಿತರ ಮಧ್ಯೆ ಪ್ರವೇಶಿಸಿ ಅಪಾಯಕಾರಿ ಕೃತಿಯಲ್ಲಿ ತೊಡಗಿದ್ದಾರೆ ಕಾರ್ಮಿಕರಲ್ಲಿ, ಯುವಜನರಲ್ಲಿಯೂ ಒಡಕುಂಟು ಮಾಡುತ್ತಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಆರ್ಥಿಕ ವಿಕೇಂದ್ರಿಕರಣ, ಕೇಂದ್ರ ರಾಜ್ಯಗಳ ಸಂಬಂಧಗಳ ಪುನರ್ವಿಮರ್ಶೆ, ಇವುಗಳ ಸಲುವಾಗಿ ಹೋರಾಟ ನಡೆಸುತ್ತಾ ಬಂದಿದೆ. 1977 ರಲ್ಲಿ ಪಶ್ಚಿಮ ಬಂಗಾಲದಲ್ಲಿ ಅಧಿಕಾರಕ್ಕೆ ಬಂದ ಎಡರಂಗ ಸರಕಾರ ಕೇಂದ್ರದಲ್ಲಿ ಜನತಾ ಸರಕಾರ ಇರುವಾಗಲೇ ಕೇಂದ್ರ—ರಾಜ್ಯ ಸಂಬಂಧಗಳ ಪ್ರಶ್ನೆಯನ್ನು ರಾಷ್ಟ್ರೀಯ ಪ್ರಶ್ನೆಯನ್ನಾಗಿ ಮಾಡಿ ಲೋಕ ಸಭೆಯ ಒಳಗೂ ಹೊರಗೂ ಚರ್ಚೆಗೆ ಅನುವು ಮಾಡಿಕೊಟ್ಟಿತು. ಆಗೆಲ್ಲಾ ಅಂದಿನ ಜನತಾ ಪಕ್ಷದ ಕೇಂದ್ರ ಸರಕಾರ ಇದಕ್ಕೆ ಯಾವ ಸುಮುಖ ಪ್ರತಿಕ್ರಿಯೆಯನ್ನು ನೀಡಲಿಲ್ಲ ಮಾತ್ರವಲ್ಲ ಅಂದಿನ ಪ್ರಧಾನಿ ಮೊರಾರಜಿಯವರು ಇದು ರಾಷ್ಟ್ರಕ್ಕೆ ಅಘಾತಕರವೆಂದು ಪೂರ್ಣವಾಗಿ ನಿರಾಕರಿಸಿದರು. ಅದೇ ಜನತಾ ಪಕ್ಷ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ, ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯ ಮೂಲಕ, ಕೇಂದ್ರ ರಾಜ್ಯ ಸಂಬಂಧಗಳ ಬಗ್ಗೆ ಏರ್ಪಡಿಸಿದ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಮೂಲಕ, ರಾಜ್ಯಪಾಲರ ಬಗ್ಗೆ ಹೊರಡಿಸಿದ ಶ್ವೇತ ಪತ್ರದ ಮೂಲಕ ರಾಷ್ಟ್ರದ ಗಮನವನ್ನು ಸೆಳೆಯಲು ನಮ್ಮೊಡನೆ ಸೇರಿದ್ದು ಅತ್ಯಂತ ಪ್ರಮುಖ ಬೆಳವಣಿಗೆ. ಕಾಶ್ಮೀರ ಸರಕಾರದ ವಜಾ ವಿರುದ್ಧ ಉಳಿದ ವಿರೋಧ ಪಕ್ಷಗಳ ಮುಖ್ಯಮಂತ್ರಿಗಳ ಜೊತೆ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯಿಂದ ಹೊರನಡೆದದ್ದು, ತೆಲುಗುದೇಶಂನ ಶಾಸಕರಿಗೆ ನಮ್ಮ ರಾಜ್ಯದಲ್ಲಿ ಆಸರೆಯೊದಗಿಸಲು ಮುಂದಾಗಿದ್ದು ಆ ಸಂಬಂಧದಲ್ಲಿ ರಾಜ್ಯದಲ್ಲಿ ಜನರ ಚಳುವಳಿ ರೂಪಿಸಲು ಉಳಿದ ಪಕ್ಷಗಳ ಜೊತೆ ಸಹಕರಿಸಿದ್ದು ಕೂಡ ಅಧಿಕಾರದ ಕೇಂದ್ರಿಕರಣವನ್ನು ತಡೆಯುವ ದಿಸೆಯಲ್ಲಿ ಮಹತ್ವದ ಹೆಜ್ಜೆಗಳು.

ಅದೇ ಸಮಯದಲ್ಲಿ ರಾಜ್ಯದಲ್ಲಿ ತನ್ನ ಮಿತಿಯಲ್ಲಿ ಮತದಾನದ ವಯಸ್ಸನ್ನು 18 ಕ್ಕೆ ಇಳಿಸಿರುವುದು ಪುರಸಭಾ ಚುನಾವಣೆಗಳು ಅಧಿಕಾರದ ವಿಕೇಂದ್ರಿಕರಣಕ್ಕೆ ಮನವಿಟ್ಟು ಜಿಲ್ಲಾ ಪರಿಷತ್ ವಿಧೇಯಕವನ್ನು ಸ್ವೀಕರಿಸಿದ್ದು, ದುಡಿಯುವ ಜನಗಳ ಸಮಸ್ಯೆಯನ್ನು ಸ್ವಲ್ಪವಾದರೂ ಪರಿಹರಿಸುವ ಅವರ ಬೆಂಬಲವನ್ನು ಪಡೆಯುವ ದಿಶೆಯಲ್ಲಿ ಶಿಕ್ಷಣ ವಿಧೇಯಕವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಅನುಕೂಲಕರವಾಗಿ, ಅದರ ವಿರುದ್ಧ ವಿಪರೀತ ಟೀಕೆ, ಮಂತ್ರಿ ಮಂಡಲದ ಭಿನ್ನಾಭಿಪ್ರಾಯವನ್ನು ಎದುರಿಸಿಯೂ ಸ್ವೀಕರಿಸಿದ್ದು, ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58

[8ನೇ ಪುಟ ನೋಡಿ]

ಅಮೇರಿಕನ್ ಸಾಮ್ರಾಜ್ಯಶಾಹಿಯ ಕೈವಾಡ

ಪ್ರಧಾನಿ ಇಂದಿರಾ ಕಗ್ಗೊಲೆ

ಅಕ್ಟೋಬರ್ 31 ರಂದು ಮುಂಜಾನೆ ಪ್ರಧಾನಿ ಇಂದಿರಾ ಗಾಂಧಿಯವರು ಗುಂಡೇಟಿಗೆ ಆಹುತಿಯಾದರು.

ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಅಂಗ ರಕ್ಷಕರಿಂದಲೇ ಕೊಲೆಯಾಗಿರುವುದನ್ನು ಕಂಡು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪಾಲಿಟ್‌ಬ್ಯೂರೋ ತನ್ನ ಆಘಾತವನ್ನು ವ್ಯಕ್ತಮಾಡಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭಾರತ ದೇಶವನ್ನು ಛಿದ್ರಗೊಳಿಸುವ ಒಳಸಂಚು ನಡೆಸಿದ್ದಾರೆ. ಅಂಥ ವಿಚ್ಛಿದ್ರಕಾರಿ ಶಕ್ತಿಗಳೇ ಇಂದಿರಾ ಗಾಂಧಿಯವರ ಅಮಾನುಷ ಕೊಲೆಗೆ ಕಾರಣೀಭೂತರಾಗಿದ್ದಾರೆಂದೂ, ಇಂಥ ಭಯೋತ್ಪಾದಕ ಶಕ್ತಿಗಳ ಚಟುವಟಿಕೆಗಳು ಮುಂದುವರಿಯಲು ಅವಕಾಶ ಮಾಡಿಕೊಟ್ಟರೆ ದೇಶದಲ್ಲಿ ಗೊಂದಲ ಉಂಟಾಗಿ, ಸಾಮ್ರಾಜ್ಯಶಾಹಿಗಳೂ ಪ್ರತಿಗಾಮಿ ಶಕ್ತಿಗಳೂ ಅದರ ದುರುಪಯೋಗ ಮಾಡಿಕೊಳ್ಳಲು ಅವಕಾಶ ಮಾಡಿ ಕೊಟ್ಟಂತಾಗುತ್ತದೆಂದು ಪಿ.ಬಿ. ಎಚ್ಚರಿಕೆ ನೀಡಿದೆ. ಎಲ್ಲ ದೇಶಪ್ರೇಮಿ, ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಮತ್ತು ಎಡ ಶಕ್ತಿಗಳೆಲ್ಲ ಪರಿಸ್ಥಿತಿಯ ಗಾಂಭೀರ್ಯವನ್ನರಿತು, ಛಿದ್ರಕಾರಿ–ಪ್ರತ್ಯೇಕತವಾದಿ ಶಕ್ತಿಗಳ ವಿರುದ್ಧ ಹೋರಾಡಲು ಎದ್ದೇಳಬೇಕೆಂದು ಕರೆಕೊಟ್ಟಿದೆ.

ರಾಜ್ಯ ಸಮಿತಿಯ ಹೇಳಿಕೆ :–

ನಮ್ಮ ರಾಷ್ಟ್ರದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ಮೇಲೆ ಗುಂಡಿನ ಸುರಿಮಳೆ ಸುರಿಸಿ ಅವರ ರಕ್ಷಕ ತಂಡಕ್ಕೆ ಸೇರಿದವರೇ ಮಾಡಿದ ಕಗ್ಗೊಲೆಯಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ತನಗಾದ ಆಘಾತವನ್ನು ವ್ಯಕ್ತಪಡಿಸುತ್ತದೆ. ರಾಜಕೀಯ ದುರುದ್ದೇಶದಿಂದ ಯೋಜಿತವಾದ ಸುವ್ಯವಸ್ಥಿತ ಕೊಲೆ ಇದೆಂದು ರಾಜ್ಯ ಸಮಿತಿ ಭಾವಿಸುತ್ತದೆ. ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿ ಪ್ರಾರಂಭಿಸಬೇಕೆಂದಿರುವ ಅಣುಯುದ್ಧಕ್ಕೆ ವಿರೋಧವಾಗಿ ಶಾಂತಿ ಚಳುವಳಿಯನ್ನು ಬೆಂಬಲಿಸುತ್ತಿರುವುದನ್ನು ಸಮಾಜವಾದಿ ರಾಷ್ಟ್ರಗಳೊಡನೆ ಸ್ನೇಹಸಂಬಂಧ ಹೊಂದಿದ್ದರಿಂದ ಕುಪಿತಗೊಂಡ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಪ್ರಯತ್ನವಿದೆಂದು ಪಾರ್ಟಿ ಅಭಿಪ್ರಾಯ ಪಡುತ್ತದೆ. ದೇಶವನ್ನು ಛಿದ್ರ ವಿಚ್ಛಿದ್ರಗೊಳಿಸಲು ಅಸ್ಸಾಂ, ಪಂಜಾಬ್, ತ್ರಿಪುರ, ಮಿಜೋರಾಂ ಪ್ರದೇಶಗಳಲ್ಲಿ ನಡೆಸುತ್ತಿರುವ ಛಿದ್ರಕಾರಿ ಕುತಂತ್ರಗಳ ಮುಂದುವರಿಕೆ ಇದಾಗಿದೆಂದು ರಾಜ್ಯ ಸಮಿತಿ ಅಭಿಪ್ರಾಯ ಪಡುತ್ತದೆ. ಇಂಥ ಪ್ರಯತ್ನ ಭಾರತದ ಗೂಢಚರ್ಯೆ ಮತ್ತು ಭದ್ರತಾ ವ್ಯವಸ್ಥೆಯಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಭಯೋತ್ಪಾದಕ ಸಾಧನವಾದ ಸಿ.ಐ.ಎ. ಎಷ್ಟು ಆಳವಾಗಿ ಹೊಕ್ಕಿದೆಂಬುದನ್ನು ಬಹಿರಂಗ ಗೊಳಿಸುತ್ತದೆ. ದೇಶದ ಹಾಗೆಯೇ ರಾಜಕೀಯ ಮುಖಂಡರ ರಕ್ಷಣೆಯ ದೃಷ್ಟಿಯಿಂದ ದೇಶದ ಗೂಢಚರ್ಯೆ ಮತ್ತು ಭದ್ರತಾ ವ್ಯವಸ್ಥೆಯನ್ನು ಈ ಹಸ್ತಕರಿಂದ ಶುದ್ಧಿಗೊಳಿಸಿ, ವ್ಯವಸ್ಥೆಯನ್ನು ಬಿಗಿಗೊಳಿಸ ಬೇಕೆಂದು ಒತ್ತಾಯಿಸುತ್ತದೆ.

ಇಂಥಹ ಭಯೋತ್ಪಾದನೆಯ ಮುಂದುವರಿಕೆ ಸಾಮ್ರಾಜ್ಯಶಾಹಿ ಹಸ್ತಕರಿಗೆ, ಪ್ರತಿಗಾಮಿ ವಿಚ್ಛಿದ್ರಕಾರಿಗಳಿಗೆ ಫಲವತ್ತಾದ ನೆಲ ಒದಗಿಸಿ ಕೊಡುತ್ತದೆ. ಆದ್ದರಿಂದ ದೇಶದ ಪ್ರಜಾಸತ್ತಾತ್ಮಕ ಪಕ್ಷಗಳು, ಎಡ ಶಕ್ತಿಗಳು, ಸಾಮೂಹಿಕ ಸಂಘಟನೆಗಳು ಅಪಾಯದ ಮುನ್ಸೂಚನೆಯನ್ನು ಕಂಡು ದೇಶದ ಸಮಗ್ರತೆಯನ್ನ ರಕ್ಷಿಸಲು, ವಿಭಜಕ ಶಕ್ತಿಗಳನ್ನು ಸೋಲಿಸಲು ಮುಂದಾಗಬೇಕೆಂದು ಕರೆ ಕೊಡುತ್ತದೆ.

ಕರ್ನಾಟಕ ರಾಜ್ಯ ವಿದ್ಯಾರ್ಥಿ ಫೆಡರೇಶನ್, ಡಿ.ವ್ಯಾ.ಎಫ್.ಐ. ಪ್ರಾಂತ ರೈತ ಸಂಘ, ಸಿಐಟಿಯುಗಳೂ ಇಂದಿರಾಗಾಂಧಿಯವರ ಅಕಾಲಿಕ ಮರಣಕ್ಕೆ ತಮ್ಮ ಶೋಕ ವ್ಯಕ್ತ ಪಡಿಸಿವೆ.

ಓದುಗರಿಗೆ – ಏಜಂಟರಿಗೆ

ಐಕ್ಯರಂಗ ರಾಜ್ಯೋತ್ಸವ ವಿಶೇಷಾಂಕವನ್ನು ಈ ವಾರ ಹೊರತರಲು ಸಾಧ್ಯವಾಗಲಿಲ್ಲ, ಅದನ್ನು ನವಂಬರ್ 25ರಂದು ಪ್ರಕಟಿಸಲಾಗುವುದು. ಎಲ್ಲರೂ ಸಹಕರಿಸ ಬೇಕಾಗಿ ವಿನಂತಿ.

ಏಕೀಕರಣ ಚಳುವಳಿಯ ಸೂಕ್ಷ್ಮ ಪರಿಚಯ

– ಎನ್. ಕೆ. ಉಪಾಧ್ಯಾಯ

ಶತಮಾನಗಳಿಂದ ಹರಿದು ಹಂಚಿ ಹೋಗಿದ್ದ ಕನ್ನಡನಾಡು ನವೆಂಬರ್ 1, 1956 ರಂದು ಒಂದುಗೂಡಿತ್ತು. 28 ಆಡಳಿತೆಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಒಂದಾಗಿ ಹೋರಾಟದ ಮೂಲಕ ತಮ್ಮ ರಾಜ್ಯ ಗಳಿಸಿ ಇಂದಿಗೆ ಇಪ್ಪಂತೆಂಟು ವರ್ಷವಾಯಿತು.

1905 ರಲ್ಲಿ ಬಂಗಾಳದ ವಿಭಜನೆಯ ವಿರುದ್ಧ ನಡೆದ ಹೋರಾಟ ಭಾಷಾವಾರು ಪ್ರಾಂತ ರಚನೆಯ ಕೂಗಿಗೆ ಚಾಲನೆ ನೀಡಿತು. ಏಕೀಕರಣ ಚಳುವಳಿಯ ಪಿತಾಮಹ ಆಲೂರು ವೆಂಕಟರಾಯರು ಹೇಳಿರುವಂತೆ 1905 ರಿಂದ 1915 ರ ಹಲವಾರು ಸಂಘ ಸಂಸ್ಥೆ ಕಟ್ಟಬೇಕಾಯಿತು. 917 ರಲ್ಲಿ ಮಾಂಟೇಗ್ ಕ್ಲೆಂಪ್ಸೊರ್ಡ್ ಸುಧಾರಣ ಸಮಿತಿ ಮುಂದೆ ಮನವಿ ಅರ್ಪಿಸಿದ ನಂತರ ಚಳುವಳಿಗೆ ಚಾಲನೆ ಬಂತು. 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ನಂತರ ಈ ಚಳುವಳಿಗೆ ಹೆಚ್ಚು ಪ್ರಚಾರ ಸಿಕ್ಕಿತು. ಸ್ವಾತಂತ್ರ್ಯ ಚಳುವಳಿಯ ಅಂಗವಾಗಿಯೇ ಪ್ರಾಂತ ರಚನೆಯ ಹೋರಾಟವೂ ಮುಂದುವರೆಯಿತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ 1938 ರಲ್ಲೇ ಭಾಷಾವಾರು ಪ್ರಾಂತ ರಚನೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದರೂ ಕೂಡ ತಾವು ಅಧಿಕಾರಕ್ಕೆ ಬಂದ ನಂತರ ಕುಂಟು ನೆವ ಮುಂದೆ ಮಾಡಿ ಈ ಮಹತ್ವದ ಪ್ರಶ್ನೆಯನ್ನು ಕಡೆಗಣಿಸುತ್ತ ಬಂತು. ರಾಜ್ಯಾಂಗ ಘಟನೆ ತಯಾರಾಗುತ್ತಿದ್ದಾಗ ಭಾಷಾವಾರು ಪ್ರಾಂತ ರಚನೆಗಾಗಿ ಚಳುವಳಿ ತೀವ್ರಗೊಂಡಾಗ 1948 ರಲ್ಲಿ ಧಾರ ಸಮಿತಿ ನೇಮಿಸಲಾಯಿತು. ಹಳೇ ಮೈಸೂರು ಮತ್ತು ಕೊಡಗು ಕರ್ನಾಟಕದಲ್ಲಿ ಸೇರಲು ಇಚ್ಛೆ ಪಟ್ಟರೆ ಹೊಸ ರಾಜ್ಯ ನಿರ್ಮಾಣ ಮಾಡಬಹುದೆಂಬ ವರದಿಯನ್ನು ಅದು ಸಲ್ಲಿಸಿತು. ಅದರ ವಿರುದ್ಧ ತೀವ್ರ ಪ್ರತಿಭಟನೆ ನಡೆದಾಗ ಮತ್ತೊಂದು ಕಮಿಟಿ ನೇಮಿಸಲಾಯಿತು. ಅದೂ ಕೂಡ ಮೈಸೂರು ಕಾಂಗ್ರೆಸ್ ನಾಯಕರನ್ನು ವಿರೋಧವಾಗಿ ಎತ್ತಿ ಕಟ್ಟುವ ತಂತ್ರ ಹೂಡಿತು. ಇದರಿಂದ ಮತ್ತಷ್ಟು ಉಗ್ರ ಚಳುವಳಿ ನಡೆಸಲಾಯಿತು.

ಮೈಸೂರು-ಕೊಡಗು ಪ್ರದೇಶಗಳ ಹೊರಗಿದ್ದ ಕರ್ನಾಟಕ ಕಾಂಗ್ರೆಸ್ ಸಮಿತಿ ಜನತೆಯ ಒತ್ತಾಯಕ್ಕೆ ಮಣಿದು ಆ ವರದಿಯನ್ನು ಖಂಡಿಸಿ ಕರ್ನಾಟಕ ಪ್ರಾಂತ ಅಸೆಂಬ್ಲಿ ಮತ್ತು ಲೋಕಸಭೆ ಸದಸ್ಯತ್ವಕ್ಕೆ ಕಾಂಗ್ರೆಸ್ ನಾಯಕರ ಅನುಮತಿ ಪಡೆದು ರಾಜೀನಾಮೆ ಕೊಡಬೇಕೆಂದು ನಿರ್ಧರಿಸಿದರೂ ಮೇಲಿನ ನಾಯಕರಿಗೆ ಹೆದರಿ ನಿರ್ಣಯವನ್ನು ಅನುಷ್ಠಾನದಲ್ಲಿ ತರಲಿಲ್ಲ. ಇದಕ್ಕೆ ಬೇಸತ್ತ ಹಲವಾರು ಪ್ರಮುಖ ಕಾಂಗ್ರೆಸ್ ಮುಖಂಡರು ತಮ್ಮ ಪಕ್ಷಕ್ಕೆ ರಾಜೀನಾಮೆ ಕೊಟ್ಟು ಏಕೀಕರಣ ಪಕ್ಷವೆಂಬ ಹೊಸಪಕ್ಷ ರಚಿಸಿದರು.

1952 ರಲ್ಲಿ ಚುನಾವಣೆ ನಡೆದಾಗ ಜನರ ಮತಗಳಿಸುವ ದುರುದ್ದೇಶದಿಂದ ಭಾಷಾವಾರು ಪ್ರಾಂತ ರಚನೆ ಮಾಡುತ್ತೇವೆಂದು ಘೋಷಿಸಿದ ಕಾಂಗ್ರೆಸ್ಸು ಚುನಾವಣೆಯ ನಂತರ 1953 ರಲ್ಲಿ ವಾಂಗಲ್‌ನಲ್ಲಿ ಸೇರಿದ ಅಧಿವೇಶನದಲ್ಲಿ ಪ್ರಾಂತ ರಚನೆಯನ್ನು ವಿರೋಧಿಸಿ ನಿರ್ಣಯ ಕೈಗೊಂಡಿತು.

ನಿರ್ಣಯ ಗಾಯದ ಮೇಲೆ ಬರೆ ಎಳೆದಂತಾಗಿ, ಆಂಧ್ರದಲ್ಲಿ ಶ್ರೀರಾಮುಲು ಉಪವಾಸ ಕೈಗೊಂಡು ಹುತಾತ್ಮರಾದಾಗ ಕೇಂದ್ರ ಸರಕಾರ ಆಂಧ್ರ ಪ್ರಾಂತ ರಚನೆಯ ತೀರ್ಮಾನ ಮಾಡಿತು. ಇದರಿಂದಾಗಿ ಕರ್ನಾಟಕ ಮಹಾರಾಷ್ಟ್ರ ಮತ್ತಿನ್ನಿತರೆಡೆಗಳಲ್ಲಿಯ ಚಳುವಳಿಗೆ ಹೊಸ ಸ್ಫೂರ್ತಿ ನೀಡಿದಂತಾಯಿತು.

ಇಷ್ಟು ದಿವಸ ಸಾಹಿತ್ಯ ಪರಿಷತ್ತು ಕಾಂಗ್ರೆಸ್ ಮತ್ತು ಬುದ್ಧಿ ಜೀವಿಗಳು, ನಿರ್ಣಯ, ಹೇಳಿಕೆಗಳ ಮೂಲಕ ಕರ್ನಾಟಕ ಏಕೀಕರಣದ ಘೋಷಣೆ ಕೂಗುತ್ತಿದ್ದರೂ ಕಮ್ಯೂನಿಸ್ಟ್ ಪಕ್ಷ ಕೂಡ ತನ್ನ ಪಕ್ಷಕ್ಕೆ ಕರ್ನಾಟಕ ಪ್ರಾಂತ ಕಮ್ಯುನಿಸ್ಟ್ ಪಕ್ಷವೆಂದು ಹೆಸರಿಟ್ಟಿದ್ದರೂ ಕೂಡ ನಿರ್ಣಯ ಕೆಲವು ಸಲ ಮತಪ್ರದರ್ಶನಗಳಿಗಷ್ಟೇ ತಮ್ಮ ಚಳುವಳಿಯನ್ನು ಸ್ಥೀಮಿತ ಗೊಳಿಸಿತ್ತು. ಆದರೆ 1953 ಏಪ್ರಿಲ್ 19 ರಂದು ಹುಬ್ಬಳ್ಳಿಯಲ್ಲಿ ಕೆ.ಪಿ.ಸಿ.ಸಿ. ಸಭೆ ಸೇರಿದಾಗ 25,000 ಕ್ಕೂ ಮೇಲ್ಪಟ್ಟು ಜನರನ್ನು ಸೇರಿಸಿ ಮತ ಪ್ರದರ್ಶನ ನಡೆಸಿ, ಲಾಠಿ ಚಾರ್ಜು-ಗೋಳೀಬಾರನ್ನೆದುರಿಸಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿದ್ದ ಕಾಂಗ್ರೆಸ್ ಮುಖಂಡರಿಂದ ರಾಜೀನಾಮೆ ಪತ್ರ ಬರೆಸಿಕೊಳ್ಳುವುದರಲ್ಲಿ ಯಶಸ್ವಿಯಾಯಿತು. ನನ್ನನ್ನೊಳಗೊಂಡು ಹಲವಾರು ಜನ ಬಂಧನಕ್ಕೊಳಗಾಗಬೇಕಾಯಿತು. ಏಕೀಕರಣ ಚಳುವಳಿಗೆ ಇದು ಹೊಸ ತಿರುವನ್ನು ನೀಡಿತು.

ಹೋರಾಟಕ್ಕೆ ಹೊಸ ಸ್ವರೂಪ ಕೊಡಲು ದಾವಣಗೆರೆಯಲ್ಲಿ ಸರ್ವ ಪಕ್ಷಗಳ ಸಭೆ ಸೇರಿ ಆಗಸ್ಟ್ 9, 1953 ರಿಂದ ಹೋರಾಟ ಆರಂಭಿಸುವ ನಿರ್ಣಯವಾಯಿತು. ಕಮ್ಯುನಿಸ್ಟ್, ಪಿ.ಎಸ್.ಪಿ., ಏಕೀಕರಣ ಸಮಿತಿ ಮತ್ತು ಸ್ವತಂತ್ರರು ಅದರಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ ದೂರ ಉಳಿದಿತ್ತು. ಸರಕಾರ ಕೂಡಲೇ ದಬ್ಬಾಳಿಕೆ ಪ್ರಾರಂಭಿಸಿ ಆಗಸ್ಟ್ 8 ರಂದೇ ಮುಖಂಡರನ್ನೆಲ್ಲ ಬಂಧಿಸಿತು. ಆದರೂ ಕೂಡ ಚಳುವಳಿ ನಡೆಯಿತು. ಅದೇ ಸಮಯದಲ್ಲಿ ಹುಬ್ಬಳ್ಳಿಯಲ್ಲಿ ಉಪಚುನಾವಣೆ ನಡೆದು ಕಾಂಗ್ರೆಸ್ ಸೋತು ಏಕೀಕರಣಕ್ಕಾಗಿ ನಿಲ್ಲಿಸಿದ ಉಮೇದುವಾರ ಪ್ರಚಂಡ ಬಹುಮತ ಪಡೆದರು. ಇದರಿಂದ ಕಾಂಗ್ರೆಸ್ ಕಂಗಾಲಾಗಿ ರಾಜ್ಯ ಪುನರ್ವಿಂಗಡಣ ಸಮಿತಿಯನ್ನು ನೇಮಿಸುವಂತೆ ಕೇಂದ್ರದ ಮೇಲೆ ಒತ್ತಾಯ ತಂದಿತು. 1955ರಲ್ಲಿ ಆ ವರದಿ ಪ್ರಕಟವಾಗಿ ಕರ್ನಾಟಕ ಪ್ರಾಂತಕ್ಕೆ ಪುರಸ್ಕಾರ ದೊರೆತರೂ ಕೂಡ ಬಳ್ಳಾರಿ ಜಿಲ್ಲೆಯಕೆಲವು ಭಾಗವನ್ನು ಆಂಧ್ರಕ್ಕೂ, ಕಾಸರಗೋಡನ್ನು ಕೇರಳಕ್ಕೂ ಸೇರಿಸಬೇಕೆಂದು ಶಿಫಾರಸು ಮಾಡಲಾಗಿತ್ತು. ಕಾಸರಗೋಡು ಬಳ್ಳಾರಿಯಲ್ಲಿ ಉಗ್ರ ಪ್ರತಿಭಟನೆ ನಡೆದು ಸಾವಿರಾರು ಜನ ಬಂಧಿತರಾದರು- ಬಳ್ಳಾರಿಯಲ್ಲಿ ಜಯ ದೊರೆಯಿತು. ಕಾಸರಗೋಡು ಕೇರಳದಲ್ಲೇ ಉಳಿಯಿತು.

ಆದರೆ ಒಂದೇ ಕರ್ನಾಟಕ ಪ್ರಾಂತವಾಗಬಾರದೆಂದೂ- ಎರಡು ಕರ್ನಾಟಕ ಇರಬೇಕೆಂದೂ, ಹಳೇ ಮೈಸೂರಿನ ಕಾಂಗ್ರೆಸ್ ಮುಖಂಡರು ಪ್ರತಿಪಾದಿಸಿ ಒಂದೇ ಕರ್ನಾಟಕವಾಗುವುದಕ್ಕೆ ಸಾಧ್ಯವಿದ್ದ ತಡೆ ಒಡ್ಡಿದರು. ಹಳೇ ಮೈಸೂರಿನಲ್ಲಿ ಒಕ್ಕಲಿಗರ ಪ್ರಾಬಲ್ಯ, ವಿಲೀನವಾಗತಕ್ಕ ಮುಂಬಯಿ-ಹೈದರಾಬಾದ್ ಪ್ರದೇಶಗಳಲ್ಲಿ ಲಿಂಗಾಯತರ ಪ್ರಭಾವ ಹೀಗೆ ಎರಡು ಬಲಿಷ್ಠ ಕೋಮಿನ ಕಾಂಗ್ರೆಸ್ ಮುಖಂಡರು (ಬೇರೆ ಪಕ್ಷದವರಲ್ಲ) ಅಖಂಡ ಕರ್ನಾಟಕ ರಚನೆಗೂ ಹೊಸ ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡುವುದಕ್ಕೂ ವಿರೋಧ ವ್ಯಕ್ತಮಾಡುತ್ತಲೇ ಬಂದರು. ಕೊನೆಗೆ ಭಾಷಾವಾರು ಪ್ರಾಂತ ರಚನೆಯಾದಾಗ 1956ರಲ್ಲಿ ಮೈಸೂರು ಪ್ರಾಂತ ರಚನೆಯಾಯಿತು.

ಕಾಂಗ್ರೆಸಿನ ಹಿರಿಯ ರಾಜಕಾರಣಿಯಾದ ನಿಜಲಿಂಗಪ್ಪ, ಜತ್ತಿ, ಕಂಠಿ, ಕಡಿದಾಳ ಮಂಜಪ್ಪ ಮೊದಲಾದವರೆಲ್ಲ ಮುಖ್ಯ ಮಂತ್ರಿಗಳಾಗಿದ್ದರೂ ಕೂಡ ಮೈಸೂರು ಪ್ರಾಂತದ ಮುಖ್ಯಮಂತ್ರಿಗಳಾಗಿದರ್ದಲ್ಲದೆ, ಕರ್ನಾಟಕ ಪ್ರಾಂತದಲ್ಲವೆಂಬುದನ್ನು ಗಮನಿಸಬೇಕು. ಮೈಸೂರು ಪ್ರಾಂತವೆಂಬುದನ್ನು ತೆಗೆದು ಕರ್ನಾಟಕ ಪ್ರಾಂತವೆಂದು ಹೆಸರಿಡುವ ಶಕ್ತಿ ಅವರಲ್ಲಿ ಬರಲಿಲ್ಲ. ಹಳೇ ಮೈಸೂರು-ಹೊಸಮೈಸೂರು ತಿಕ್ಕಾಟವೇ ಇದಕ್ಕೆ ಕಾರಣ. ತೋರಿಕೆಗಾಗಿಯಷ್ಟೇ ಭಾಷಾವಾರು ಪ್ರಾಂತ ರಚನೆಗೆಯ ಘೋಷಣೆ ಕೂಗುತ್ತ ಬಂದ ಮುಖಂಡರೇ ಹದಿನೆಂಟು ವರ್ಷಕ್ಕೂ ಮೇಲ್ಪಟ್ಟು ಹೊಸ ಪ್ರಾಂತಕ್ಕೆ ಕರ್ನಾಟಕ ವೆಂಬ ಹೆಸರಿರಿಸುವುದಕ್ಕೆ ವಿಫಲರಾಗಿರುವುದನ್ನು ನೆನಪಿಡುವುದು ಅಗತ್ಯ. ಡಿ.ದೇವರಾಜ ಅರಸರು ಮುಖ್ಯಮಂತ್ರಿಯಾದನಂತರವೇ ಮೈಸೂರು ಪ್ರಾಂತ ಹೋಗಿ ಕರ್ನಾಟಕ ಪ್ರಾಂತವಾಯಿತು.

ಎಲ್ಲ ವಿರೋಧ ಪಕ್ಷಗಳನ್ನೂ, ಸ್ವತಂತ್ರರನ್ನೂ ಒಂದುಗೂಡಿಸಿ ತೀವ್ರ ಚಳುವಳಿಗೆ ಕಮ್ಯುನಿಸ್ಟ್‌ಪಾರ್ಟಿ ನೇತೃತ್ವ ನೀಡಿರುವುದಷ್ಟೇ ಅಲ್ಲ, ಮೈಸೂರು ತೆಗೆದು ಕರ್ನಾಟಕಪ್ರಾಂತವೆಂದುನಾಮಕರಣ ಮಾಡುವುದಕ್ಕೂ ಶ್ರಮಿಸಿದೆ. ಇದರ ಜೊತೆಯಲ್ಲಿಯೇ ನವ ಕರ್ನಾಟಕ ರಾಜ್ಯದ ಆಡಳಿತ ಭಾಷೆ ಕನ್ನಡವೇ ಆಗಬೇಕೆಂದೂ, ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯಗಳ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ಸಿಗಬೇಕೆಂದೂ ಕಮ್ಯುನಿಸ್ಟ್‌ಪಾರ್ಟಿ ಹೋರಾಡುತ್ತ ಬಂದಿತ್ತು.

ಪಕ್ಷ ಚಿಕ್ಕದಾಗಿದ್ದರೂ ಕೂಡ ನುರಿತ ಮುಖಂಡತ್ವ, ಸಂಘಟಿತ ಕಾರ್ಮಿಕರನ್ನು, ರೈತರನ್ನೂ ಯುವಜನತೆಯನ್ನು ಮೈಸೂರು, ಉತ್ತರ ಕರ್ನಾಟಕ, ಮಂಗಳೂರುಗಳಲ್ಲಿ ಭಾಷಾವಾರು ಪ್ರಾಂತರಚನೆಯಲ್ಲಿ ಸಕ್ರಿಯ ಭಾಗವಹಿಸುವಂತೆ ಮಾಡಿದ್ದರಿಂದಲೇ ಜಾತಿ ತಳಹದಿಯ ಮೇಲೆ ಗಣಿತ ಲೆಕ್ಕ ಹಾಕುತ್ತಿದ್ದ ಕಾಂಗ್ರೆಸ್ ಮುಖಂಡರ ಮೇಲೂ ಕೇಂದ್ರ ಸರಕಾರದ ಮೇಲೂ ಒತ್ತಡ ತಂದು ಆಗಿನ ಎರಡು ಕೋಟಿ ಕನ್ನಡಿಗರ ಕನಸನ್ನು ನನಸು ಗೊಳಿಸಲು ಸಾಧ್ಯವಾಯಿತು.

ನಮ್ಮ ದೇಶದ ಸ್ವಾತಂತ್ರ್ಯಹೋರಾಟದಲ್ಲಯೂ ರೈತ-ಕಾರ್ಮಿಕರ ಪಾತ್ರ ಪ್ರಧಾನವಾಗಿತ್ತು. ಹಾಗೆಯೇ ಭಾಷಾವಾರು ಪ್ರಾಂತ ರಚನೆಯಲ್ಲೂ ಅದು ಪರಿಣಾಮಕಾರಿ ಪಾತ್ರವಹಿಸುತ್ತೆಂಬುದನ್ನು ಈಗಿನ ವೇಳೆಗೆ ನೆನಸಿಕೊಳ್ಳಬೇಕು.

"ನೂತನವಾಗಿ ರೂಪುಗೊಳ್ಳುತ್ತಿರುವ ಕನ್ನಡನಾಡು ಎಲ್ಲ ರೀತಿಯಲ್ಲಿಯೂ ಸರ್ವವ್ಯಾಪ್ತಿಯಾಗಿ ಅಭಿವೃದ್ಧಿ ಹೊಂದಲು ಒಂದಾಗಿ ದುಡಿಯಲು ಇಂದು ಪಣತೊಡೋಣ! ನಮ್ಮ ನಾಡಿನಲ್ಲಿರುವ ಪ್ರಜಾಪ್ರಭುತ್ವಶಕ್ತಿಗಳನ್ನು ಬಲಗೊಳಿಸೋಣ! ಪ್ರಬಲವಾದ ಪ್ರಜಾಪ್ರಭುತ್ವ ಚಳುವಳಿಯನ್ನು, ರೈತ ಕಾರ್ಮಿಕ ಸಂಘಟನೆಯನ್ನು ಕನ್ನಡ ನಾಡಿನಲ್ಲಿ ಕಟ್ಟಿ ಬೆಳೆಸೋಣ." ಎಂದು ಅಂದಿನ ಕಮ್ಯುನಿಸ್ಟ್‌ಪಕ್ಷದ ಮುಖಪತ್ರವಾದ ಜನಶಕ್ತಿ ನವಂಬರ್ 1, 1956 ಸಂಚಿಕೆಯಲ್ಲಿ ಬರೆದ ಸಂಪಾದಕೀಯದಲ್ಲಿ ಜನತೆಯ ಆಶೋತ್ತರಗಳನ್ನು ವ್ಯಕ್ತಮಾಡಿದ್ದವು. ಅಂಥ ಆಸೆ ಎಷ್ಟು ಪೂರೈಸಿದೆ. ನೋಡೋಣ.

ಕಮ್ಯೂನಿಸ್ಟ್ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ನೋಡಿದರೆ ನಾವು ಈಗ ಸ್ವಲ್ಪ ಮಟ್ಟಿಗೆ ಮುಂದುವರಿದಿದ್ದೇವೆ, ಕರ್ನಾಟಕದ ಜನತೆಯ, ರೈತ-ಕಾರ್ಮಿಕರ, ವಿದ್ಯಾರ್ಥಿ ಯುವಜನತೆಯ ಸಂಘಟನೆ ಬೆಳೆಸಿ ಹೋರಾಡುತ್ತಿದ್ದೇವೆ. ಅದರ ಜೊತೆಯಲ್ಲಿಯೇ, ಕರ್ನಾಟಕದ ನೆಲದಲ್ಲಿ ಹುದುಗಿರುವ ಅಪಾರ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಳ್ಳಲು, ವಿಜಯನಗರ ಉಕ್ಕಿನ ಕಾರ್ಖಾನೆ, ಕಬ್ಬಿಣ, ಮೈಕ ಮೊದಲಾದ ಗಣಿಗಳ ಅಭಿವೃದ್ಧಿ, ಮಂಗಳೂರಿನಲ್ಲಿ ತೈಲಶುದ್ಧೀಕರಣ, ಕಚ್ಚಾ ಉಕ್ಕು ತಯಾರಿಕಾ ಕೇಂದ್ರಗಳ ಸ್ಥಾಪನೆ, ದೊಡ್ಡ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳ ಸ್ಥಾಪನೆ, ಕಾಳಿ, ಕೃಷ್ಣಾ ಗಳಂತ ವಿದ್ಯುತ್ ಉತ್ಪಾದಕಾ ಕೇಂದ್ರಗಳ ತ್ವರಿತ ಕಾರ್ಯ, ಮಲೆನಾಡು ಪ್ರದೇಶದ ಅಭಿವೃದ್ಧಿ, ಬರಗಾಲ ಪ್ರದೇಶಗಳಿಗಾಗಿ ಒಣಬೇಸಾಯ ಯೋಜನೆ, ನೀರಾವರಿ ಸೌಲಭ್ಯ, ಕಾರವಾರ ಬಂದರು ಅಭಿವೃದ್ಧಿ, ಹುಬ್ಬಳ್ಳಿ-ಕಾರವಾರ, ಮುಂಬಯಿ-ಮಂಗಳೂರು ರೇಲ್ವೆ, ಮೀಟರ್ ಗೇಜ್‌ರೇಲ್ವೆಗಳ ಬ್ರಾಡ್‌ಗೇಜ್ ಪರಿವರ್ತನೆ, ಹೊಸ ರೇಲ್‌ಮಾರ್ಗ ಹೀಗೆ ಕರ್ನಾಟಕ ರಾಜ್ಯದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಕೈಗೊಳ್ಳಬೇಕೆಂದೂ ಕಾರ್ಯ ರೂಪದಲ್ಲಿರುವ ಪ್ರಮುಖ ಯೋಜನೆಗಳನ್ನು ಕೂಡಲೇ ಮುಕ್ತಾಯಗೊಳಿಸಿ ಅದರ ಲಾಭ ಸಾರ್ವಜನಿಕರಿಗೆ, ರೈತರಿಗೆ, ಲಭ್ಯವಾಗುವಂತೆ ಮಾಡಬೇಕೆಂದು ಹೋರಾಟ ಮುಂದುವರಿಸ ಬೇಕಾಗಿದೆ.

ಕರ್ನಾಟಕದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸುವುದರಲ್ಲಿಯೂ ಪ್ರಯತ್ನ ನಡೆಸಿದ್ದೇವೆ. 1983 ರ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸರ್ವಾಧಿಕಾರಿ ಶಕ್ತಿಯಾದ ಕಾಂಗ್ರೆಯನ್ನು ಸೋಲಿಸುವುದರಲ್ಲಿ ಯಶಸ್ವಿಯಾಗಿದ್ದೇವೆ. ಕೇಂದ್ರ ಸರಕಾರದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ವಿರುದ್ಧ ಕೂಡ ಜನತೆಯನ್ನು ಸಂಘಟಿಸಿ ಪರಿಣಾಮಕಾರಿ ಹೋರಾಟ ನಡೆಸಿದ್ದೇವೆ.

ಇನ್ನೂ ಮಾಡಬೇಕಾದ ಕೆಲಸ ಬಹಳವಿದೆ. ಸಂಘಟಿತ ಕಾರ್ಮಿಕರನ್ನು ಆರ್ಥಿಕತೆಯಿಂದ ಹೊರತಂದು ರಾಜಕೀಯ ತಿಳುವಳಿಕೆ ಉಂಟುಮಾಡಬೇಕು, ಅಸಂಘಟಿತ ಕಾರ್ಮಿಕರನ್ನೂ ಕೃಷಿ ಕೂಲಿಗಾರರನ್ನೂ ಸಂಘಟಿಸಬೇಕು, ಹಿಂದುಳಿದವರನ್ನೂ, ದಲಿತರನ್ನೂ ಗಿರಿಜನರನ್ನೂ ಸಂಘಟಿಸಿ ಪ್ರಜಾಪ್ರಭುತ್ವ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಕೈಗಾರಿಕೋದ್ಯಮಗಳು ಬೆಳೆದು ಬರುವಂತೆ ಮಾಡಿ ನಿರುದ್ಯೋಗ ಸಮಸ್ಯೆಗೆ ಸ್ವಲ್ಪ ಪರಿಹಾರ ಸಿಗುವಂತೆ ಮಾಡಬೇಕು. ಕರ್ನಾಟಕದ ಎಡ ಪಕ್ಷಗಳ ಮೇಲೆ, ಪ್ರಜಾಪ್ರಭುತ್ವ ವ್ಯಕ್ತಿಗಳ ಮೇಲೆ ದೊಡ್ಡ ಜವಾಬ್ದಾರಿಯಿದೆ. ಅದನ್ನು ಹೊತ್ತುಕೊಂಡು, ಕರ್ನಾಟಕದ, ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ದುಡಿಯೋಣ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸೋಣ.

ಪೊಲಿಟ್‌ಬ್ಯೂರೋ ಹೇಳಿಕೆ

ದೇಶದ ಸಮಗ್ರತೆಗಾಗಿ ಹೋರಾಡೋಣ

ದೇಶದ ಜನರ ಹಾಗೂ ವಿರೋಧ ಪಕ್ಷಗಳ ಸಂಪೂರ್ಣ ಬೆಂಬಲದಿಂದ, ಕೇಂದ್ರ ಸರಕಾರ ಮತ್ತು ಕಾಂಗ್ರೆ ಆಂಧ್ರದಲ್ಲಿ ಪಕ್ಷಾಂತರಿ ಸರಕಾರ ಹೇರುವುದರ ವಿರುದ್ಧ ನಡೆಸಿದ ಜಯಗಳಿಸಿದ ಆಂಧ್ರದ ಜನತೆಯನ್ನೂ, ವಿರೋಧ ಪಕ್ಷಗಳನ್ನೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಪಾಲಿಟ್‌ಬ್ಯೂರೋ ಅಭಿನಂದಿಸಿದೆ. ಆಳುವ ಕಾಂಗ್ರೆ ಪಕ್ಷ ದೇಶದ ಮೇಲೆ ಸರ್ವಾಧಿಕಾರವನ್ನು ಹೇರುವ ಪ್ರಯತ್ನವನ್ನು ಜನರ ಐಕ್ಯತೆಯಿಂದ ಎದುರಿಸ ಬಹುದೆಂಬ ವಿಶ್ವಾಸವನ್ನು ವಿರೋಧ ಪಕ್ಷ ಮತ್ತು ಜನರು ಗಳಿಸಿದ ವಿಜಯ ತೋರಿಸಿ ಕೊಡುತ್ತದೆ.

ಆದರೆ ಅದು ಪ್ರಜಾಪ್ರಭುತ್ವಶಕ್ತಿಗಳಲ್ಲಿ ಭ್ರಮೆಯನ್ನುಂಟು ಮಾಡಬಾರದು. ಆಂಧ್ರದಲ್ಲಿ ಹಿಂ ಜ ರಿ ತ ಉಂಟಾದರೂ ಕೂಡ, ಕಾಂಗ್ರೆ ವಿರೋಧಿ ಸರಕಾರಗಳನ್ನು ರುಳಿಸುವ ಪ್ರಯತ್ನವನ್ನು ಇಂದಿರಾ ಕಾಂಗ್ರೆಸ್ ಎಲ್ಲ ತರದಲ್ಲೂ ಮುಂದುವರಿಸುತ್ತದೆ. ನಮ್ಮ ದೇಶದ ರಾಜಕೀಯ ಪದ್ಧತಿಯಲ್ಲಿ ಬದಲಾವಣೆಯನ್ನು ಸೂಚಿಸಿ ಸರ್ವಾಧಿಕಾರಿ ಕೇಂದ್ರದತ್ತ ಸಾಗಲು ತೀವ್ರ ಪ್ರಯತ್ನ ನಡೆಸಿದೆ- ಎಲ್ಲ ವಿರೋಧ ಪಕ್ಷಗಳೂ ಹಾಗೆಯೇ ಕೆಲವರು ಆಳುವ ಪಕ್ಷದಲ್ಲಿಯೂ ಅದನ್ನು ವಿರೋಧಿಸುತ್ತಿದ್ದರೂ ಕೂಡ, ಆಳುವ ಪಕ್ಷದ ಮುಖಂಡರು ಸಾಂಸತ್ತಿಕ ಪದ್ಧತಿಯ ಬದಲಾಗಿ ಅಧ್ಯಕ್ಷೀಯ ಕಾರ್ಯನಿರ್ವಾಹಕ ಮಂಡಳಿಯನ್ನು ಹೇರುವ ಸಲುವಾಗಿ ವಾತಾವರಣ ಉಂಟು ಮಾಡಲು ಸರ್ವ ಪ್ರಯತ್ನ ನಡೆಸಿದ್ದಾರೆ. ಆದ್ದರಿಂದ ಪದ್ಧತಿ ಬದಲಾವಣೆಯ ವಿರುದ್ಧ, ಸರ್ವಾಧಿಕಾರದ ವಿರುದ್ಧ ಹೋರಾಟವನ್ನು ಇನ್ನೂ ತೀವ್ರಗೊಳಿಸಬೇಕು.

ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಹದಗೆಡುತ್ತ ಹೋಗುತ್ತಿರುವಾಗ ಅದನ್ನು ಮುಚ್ಚಿಡಲು ಆಳುವ ಪಕ್ಷ ಪ್ರಯತ್ನಿಸುತ್ತಿದೆ. ಸುಳ್ಳು ಅಂಕೆ-ಸಂಖ್ಯೆಗಳನ್ನು ಅವರು ಪ್ರಕಟಿಸುತ್ತಿರುವಾಗ, ಬೆಲೆ ಸೂಚ್ಯಾಂಕ ಹೆಚ್ಚಾಗುತ್ತಲೇ ಇದೆ; ಕಾರ್ಮಿಕರನ್ನು ನೌಕರಿಯಿಂದ ಹೊರದೂಡಲಾಗುತ್ತಿದೆ; ಕಾರ್ಖಾನೆಗಳೆಲ್ಲ ವ್ಯಾಧಿಗ್ರಸ್ಥವಾಗುತ್ತಿವೆ, ನೌಕರಿ ಅಪೇಕ್ಷಿಸುವವರಿಗೆ ಕೆಲಸ ಸಿಗುತ್ತಿಲ್ಲ; ಸಾಲ-ಕರಭಾರಗಳೆಲ್ಲ ಜಾಸ್ತಿಯಾಗುತ್ತಿದೆ; "ಅತಿ ಪ್ರಸರಣ ಕಡಿಮೆಯಾಗುತ್ತದೆ" "ಬಡತನದ ರೇಖೆಗಿಂತ ಕೆಳಗಿನವರ ಸಂಖ್ಯೆ ಇಳಿಮುಖವಾಗುತ್ತಿದೆ" ಎಂಬುದರ ಕುರಿತು ಆಳುವ ಪಕ್ಷದ ಸಿದ್ಧಾಂತಗಳೆಲ್ಲ ಸುಳ್ಳಾಗುತ್ತಿವೆ.

ಜನರ ಜೀವನ ಪರಿಸ್ಥಿತಿ ಹದಗೆಡುತ್ತಿರುವುದರಿಂದಲೇ ಕಾರ್ಖಾನೆ, ಹೊಲ, ಕಚೇರಿ, ಕಂಪೆನಿಗಳಲ್ಲಿಯು ಮಿಲಿಯಗಟ್ಟಲೆ ಜನ ಹೋರಾಟದ ಕಣಕ್ಕಿಳಿದಿದ್ದಾರೆ.

ಕಾಂಗ್ರೆಯ್ಯನ್ನೊಳಗೊಂಡು ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಒಲವು ತೋರಿಸುವ ಕಾರ್ಮಿಕ ಸಂಘಟನೆಗಳೆಲ್ಲ ದುಡಿಯುವ ಜನತೆಯ ಹಕ್ಕುಗಳ ರಕ್ಷಣೆಗಾಗಿ ಒಟ್ಟಾಗುತ್ತಿವೆ. ಕಲ್ಕತ್ತದಲ್ಲಿ ಸಮಾವೇಶಗೊಂಡಿದ್ದ 17 ಅಖಿಲ ಭಾರತ ವಿರೋಧ ಪಕ್ಷಗಳು ತಯಾರಿಸಿದ 11 ಅಂಶಗಳ ಆರ್ಥಿಕ ಬೇಡಿಕೆಗಳ ಯಾದಿಯು ದೇಶದ ಎಲ್ಲ ವರ್ಗದ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತದೆ. ಕಾರ್ಮಿಕ ಸಂಘಗಳ ರಾಷ್ಟ್ರೀಯ ಹೋರಾಟ ಸಮಿತಿಯ ಬೇಡಿಕೆಗಳೊಂದಿಗೆ ಈ 11 ಅಂಶಗಳ ಕಾರ್ಯಕ್ರಮ ಸೇರಿಸಿದರೆ ಕಾಂಗ್ರೆಯ ಹಾಗೂ ಅದರ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳ ವಿರುದ್ಧ ಹೋರಾಡಲು ಒಂದು ಮಂಚ ಸಿಕ್ಕಂತಾಗುತ್ತದೆ.

11 ಅಂಶಗಳ ಆರ್ಥಿಕ ಬೇಡಿಕೆಯ ಯಾದಿ ತಯಾರಿಸಿದ 17 ವಿರೋಧ ಪಕ್ಷಗಳು ಕೇಂದ್ರ-ರಾಜ್ಯ ಸಂಬಂಧಗಳ ಮುಖ್ಯ ಪ್ರಶ್ನೆಯ ಕುರಿತು ಒಂದಭಿಪ್ರಾಯಕ್ಕೆ ಬಂದಿವೆ. ಹೋದ ವರ್ಷ ಶ್ರೀನಗರದಲ್ಲಿ ಅವರು ಕೈಕೊಂಡ ನಿರ್ಧಾರವು ಜನರ ಐಕ್ಯತೆಯನ್ನು ಬಲಪಡಿಸುವುದಲ್ಲದೆ, ರಾಜ್ಯಗಳು ಸ್ವಾಯತ್ತಾಧಿಕಾರಕ್ಕಾಗಿ ನಡೆಸಿರುವ ಹೋರಾಟಕ್ಕೆ ರಕ್ಷಣೆ ಒದಗಿಸುತ್ತದೆ.

ಕೇಂದ್ರವು ತನ್ನ ಅತ್ಯಾವಶ್ಯಕ ಕರ್ತವ್ಯವಾದ ರಾಷ್ಟ್ರದ ಸಂರಕ್ಷಣೆ, ವಿದೇಶಿ ಧೋರಣೆ, ನಾಣ್ಯ ಚಲಾವಣೆ, ಸಂಪರ್ಕ ಹಾಗೆಯೇ ದೇಶದ ಸಮಗ್ರ ಯೋಜನೆ ಮತ್ತು ಅಭಿವೃದ್ಧಿಯನ್ನು ನಿರ್ವಹಿಸುವಲ್ಲಿ ರಾಜ್ಯಗಳಿಗೆ ಕೊಡಮಾಡುವ ಸ್ವಾಯತ್ತತೆ ಕೇಂದ್ರವನ್ನು ಬಲಹೀನಗೊಳಿಸುವುದಿಲ್ಲೆಂಬ ಆಶ್ವಾಸನೆ ಆ ನಿರ್ಣಯದಲ್ಲಿದೆ. ದೇಶವನ್ನು ಭದ್ರಗೊಳಿಸುವ, ಅಭಿವೃದ್ಧಿಗೊಳಿಸುವ ಕಾರ್ಯಕ್ರಮದಲ್ಲಿ ಕೇಂದ್ರ-ರಾಜ್ಯಗಳು ಸಹಕರಿಸ ಬಹುದೆಂದೂ, ಒಬ್ಬರಿಗೊಬ್ಬರು ಕಚ್ಚಾಡುವ ಅವಶ್ಯಕತೆ ಇಲ್ಲೆಂದೂ ಆಶ್ವಾಸನೆ ಕೊಡಲಾಗಿದೆ.

ಛಿದ್ರಕಾರಿ ಶಕ್ತಿಗಳು ಇನ್ನೂ ಕ್ರಿಯಾಶೀಲವಾಗಿಯೇ ಉಳಿದಿವೆ. ಪಂಜಾಬಿನಲ್ಲಿ ಶಾಂತಿ ನೆಲೆಸುವ ಸಲುವಾಗಿ ಕೈಗೊಂಡ ಕ್ರಮಗಳಿಂದಾಗಿ ಉಗ್ರಗಾಮಿಗಳ ರಾಷ್ಟ್ರ ವಿರೋಧಿ ಚಳುವಳಿ ನಿಲ್ಲಿಸಲ್ಪಟ್ಟಿಲ್ಲ, ಅಂಥ ಚಟುವಟಿಕೆಗಳನ್ನು ಖಂಡಿಸಲಿಕ್ಕೆ ಅಕಾಲಿ ಮುಖಂಡತ್ವ ಮುಂದೆ ಬಾರದಿರುವುದು ವಿಷಾದನೀಯ. ಉಗ್ರಗಾಮಿಗಳಿಂದಾದ ಹಾನಿಯನ್ನು ಪರಿಗಣನೆಗೆ ತೆಗೆದುಕೊಂಡು ಪಂಜಾಬಿನ ಜನತೆಯಲ್ಲಿ ವಿಶ್ವಾಸ ಉಂಟುಮಾಡಲಿಕ್ಕೆ ಎಲ್ಲ ಪ್ರಯತ್ನ ಮಾಡಬೇಕು.

ಆಸ್ಸಾಮಿನ ಕುರಿತು ಚುನಾವಣಾಧಿಕಾರಿಗಳು ಮಾಡಿರುವ ಶಿಫಾರಸಿನಿಂದಾಗಿ ಬಹಳಷ್ಟು ಜನರ ನಾಗರೀಕ ಹಕ್ಕನ್ನು ಕಿತ್ತುಕೊಳ್ಳಲಾಗಿದೆ. ಭಾರತ ಕಮ್ಯೂನಿಸ್ಟ್ ಪಾರ್ಟಿ—ಕಾಂಗ್ರೆಸ್ (ಎಸ್) ನಂತ ಪಕ್ಷಗಳು ಇಷ್ಟು ವರ್ಷ ಜನರ ಐಕ್ಯತೆಗಾಗಿ ನಿಂತವರು ಈಗ ತಮ್ಮ ಧೋರಣೆ ಬದಲಾಯಿಸಿ ಚಳುವಳಿಗಾರರಿಗೆ ಬೆಂಬಲ ಕೊಡುತ್ತಿರುವುದು ವಿಷಾದನೀಯ. ಚಳುವಳಿಗಾರರ ಸಂಕುಚಿತ ರಾಷ್ಟ್ರೀಯ ಭಾವನೆಗಳಿಗೆ ಬಲಿಯಾಗಲು ನಿರಾಕರಿಸಿದ ಜನತೆಗೂ ಪಾರ್ಟಿ ಸದಸ್ಯರಿಗೂ ನಾವು ಅಭಿನಂದನೆ ಸಲ್ಲಿಸುತ್ತೇವೆ.

ಮತೀಯ ಹಾಗೂ ಧರ್ಮೀಯ ಜಗಳಗಳು ಕಡಿಮೆಯಾಗದೆ ಜಾಸ್ತಿಯಾಗುತ್ತಿರುವುದನ್ನು ಕಂಡು ಅಸಮಾಧಾನವಾಗಿದೆ. ಎಲ್ಲ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗಿ ಜಾತೀಯ ಶಕ್ತಿಗಳ ವಿರುದ್ಧ ಹೋರಾಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಬೇಕಾಗಿದೆ. ಕಾಂಗ್ರೆ ಹಾಗೆಯೇ ಕೆಲವು ರಾಜಕೀಯ ಪಕ್ಷಗಳು ತಮ್ಮ ಸಂಕುಚಿತ ರಾಜಕೀಯ ಉದ್ದೇಶ ಸಾಧನೆಯ ಸಲುವಾಗಿ ಈ ಶಕ್ತಿಗಳನ್ನು ಉಪಯೋಗಿಸುತ್ತಿರುವುದು ಖೇದಕರವಾಗಿದೆ.

ಇದೆಲ್ಲ ದೇಶದ ಮೇಲೆ ಯಾವ ರೀತಿ ಅಪಾಯವನ್ನುಂಟು ಮಾಡುತ್ತಿವೆಂಬುದನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಗಮನಿಸುವುದು ಅಗತ್ಯ.

ಭಾರತ-ಪಾಕಿಸ್ತಾನ. ಪಾಕಿಸ್ತಾನ-ಅಮೇರಿಕ ಹಾಗೆಯೇ ಅಮೇರಿಕ-ಭಾರತ ಗಳೊಳಗಿನ ಸಂಬಂಧದ ಕುರಿತು ಇತ್ತೀಚೆಗಿನ ಬೆಳವಣಿಗೆಗಳನ್ನು ನೋಡುವಾಗ ಅಮೇರಿಕ ಜಗತ್ತನ್ನಾಕ್ರಮಿಸುವ ಹೊಂಚಿನಲ್ಲಿದೆಂದು ಕಂಡು ಬರುತ್ತದೆ. ತಟಸ್ಥ ರಾಷ್ಟ್ರಗಳ ಚಳುವಳಿಯಲ್ಲಿ ಭಾರತದ ಪಾತ್ರವನ್ನು ಕಂಡ ಅಮೇರಿಕ, ಭಾರತದ ಮೇಲೆ ಆಕ್ರಮಣ ಮಾಡುವ ಸಲುವಾಗಿ ಪಾಕಿಸ್ತಾನಕ್ಕೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ.

ಭಾರತದ ನೈಋತ್ಯ ಮತ್ತು ಈಶಾನ್ಯ ಪ್ರದೇಶಗಳಲ್ಲಿ ಅಸ್ಥಿರ ಪರಿಸ್ಥಿತಿಯನ್ನುಂಟು ಮಾಡುವ ಸಲುವಾಗಿ ಪಶ್ಚಿಮದಲ್ಲಿ ಪಾಕಿಸ್ತಾನವನ್ನು ಪೂರ್ವದಿಕ್ಕಿನಲ್ಲಿ ಬಂಗ್ಲಾದೇಶವನ್ನು ಅಮೇರಿಕ ಉಪಯೋಗ ಮಾಡುತ್ತಿದೆ. ಈ ಎರಡು ರಾಷ್ಟ್ರಗಳಲ್ಲಿ ಕೂಡ ಅಲ್ಲಿನ ಜನತೆ ಮತ್ತು ವಿರೋಧ ಪಕ್ಷಗಳು ಮಿಲಿಟರಿ ಆಡಳಿತೆಯನ್ನು ವಿರೋಧಿಸುತ್ತಾ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಹೋರಾಡುತ್ತಿರುವುದು ಆನಂದದ ಸಂಗತಿ. ಅವರಿಗೆ ನಾವು ಹಾರ್ದಿಕ ಅಭಿನಂದನೆಗಳನ್ನು ಕಳುಹಿಸಿದ್ದೇವೆ.

ತಮಿಳು ಮಾತಾಡುವ ಅಲ್ಪ ಸಂಖ್ಯಾತರ ಮೇಲೆ ಶ್ರೀಲಂಕಾದಲ್ಲಿ ನಡೆಯುತ್ತಿರುವ ಕ್ರೂರ ದಾಳಿಯ ಕುರಿತು ನಾವು ವಿವಂಚನೆಗೊಳಗಾಗಿದ್ದೇವೆ. ತಮಿಳು ಮಾತಾಡುವ ಅಲ್ಪ ಸಂಖ್ಯಾತರ ಪ್ರಶ್ನೆಯ ಕುರಿತು ರಾಜಕೀಯ ಪರಿಹಾರ ಕಂಡು ಹಿಡಿಯದೆ, ಶ್ರೀಲಂಕೆಯ ಆಳುವ ಪಕ್ಷ, ತಮಿಳರ ವಿರುದ್ಧ ಪೋಲೀಸ್ ಮಿಲಿಟರಿ ದಬ್ಬಾಳಿಕೆ ನಡೆಸುತ್ತಿರುವುದಷ್ಟೇ ಅಲ್ಲ, ಇಸ್ರೇಲ್, ಇಂಗ್ಲೆಂಡ್ ಮತ್ತಿನ್ನಿತರ ಸಾಮ್ರಾಜ್ಯಶಾಹಿಗಳ ಒಳಸಂಚಿನ ಏಜಂಟರ ಮೂಲಕ ದಬ್ಬಾಳಿಕೆ ನಡೆಸಿರುವುದು ಖಂಡನೀಯ.

ಶ್ರೀಲಂಕೆಯಲ್ಲಿ ಅಲ್ಪ ಭಾಷಿಕರ ಹಕ್ಕಿನ ಸಲುವಾಗಿ ಹೋರಾಡುತ್ತಿರುವ ಕಮ್ಯೂನಿಸ್ಟ್ ಮತ್ತಿತರ ಎಡ ಶಕ್ತಿಗಳಿಗೆ ನಾವು ಅಭಿನಂದನೆ ಸಲ್ಲಿಸುತ್ತೇವೆ.

ಈಗಿನ ಪರಿಸ್ಥಿತಿಗೆ ಕಾರಣೀಭೂತವಾದ ಪಾಕಿಸ್ತಾನ, ಬಂಗ್ಲಾದೇಶ ಮತ್ತು ಶ್ರೀಲಂಕಾದ ಬೆಳವಣಿಗೆಗಳು, ಈಗಿರುವ ಲೋಕಶಾಹಿ ಪದ್ಧತಿಯ ಬದಲಾಗಿ ಅಧ್ಯಕ್ಷೀಯ ಮಾದರಿ ಸರಕಾರವನ್ನು ತರಲು ಪ್ರತಿಪಾದಿಸುತ್ತಿರುವವರನ್ನು ಎಚ್ಚರಿಸದೆ ಇರಲಾರದು.

ನಮ್ಮ ದೇಶ ಎದುರಿಸುತ್ತಿರುವ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟಿಗೆ ಸರ್ವಾಧಿಕಾರಿ ಕೇಂದ್ರಿಕರಣವೇ "ಪರಿಹಾರ" ಎಂಬ ವಾದವನ್ನು ಈ ಬೆಳವಣಿಗೆಗಳು ಅಲ್ಲಗೆಳೆಯುತ್ತವೆ. ಸರ್ವಾಧಿಕಾರವು ಸಮಸ್ಯೆಗಳನ್ನು ಬಗೆಹರಿಸುವ ಬದಲಾಗಿ ಅವುಗಳನ್ನು ಮತ್ತಷ್ಟು ಪ್ರಬಲಗೊಳಿಸುತ್ತವೆ.

ನೆರೆಕರೆಯ ರಾಷ್ಟ್ರಗಳಲ್ಲಿ ತನ್ನ ಏಜೆಂಟರ ಮೂಲಕ ಸಾಮ್ರಾಜ್ಯಶಾಹಿ ನಮ್ಮ ದೇಶದ ವಿರುದ್ಧ ಒಳಸಂಚು ನಡೆಸುತ್ತಿರುವುದು ನಿಜವಲ್ಲೆಂದು ಆ ವಾದವನ್ನೆ ತಳ್ಳಿ ಹಾಕುವವರಿಗೂ ಈ ಬೆಳವಣಿಗೆಗಳು ಎಚ್ಚರ ನೀಡುತ್ತಿವೆ. ಕೆಲವು ವಿರೋಧ ಪಕ್ಷಗಳು ಈ ಅಪಾಯದ ಕುರಿತು ಗಮನ ಹರಿಸದಿರುವುದು ಮತ್ತು ಹೊರಗಿನ ಅಪಾಯ ವಿರೋಧ ಪಕ್ಷಗಳಿಗೆ ಸಂಬಂಧವಿಲ್ಲೆಂದು ಹೇಳುತ್ತಿರುವುದು ದುಃಖದಾಯಕ. ಅದೇ ಸಮಯದಲ್ಲಿ ಎಡ ಪಕ್ಷಗಳಲ್ಲದೆ ಕೆಲವು ವಿರೋಧ ಪಕ್ಷಗಳು ಕೂಡ ಸಾಮ್ರಾಜ್ಯಶಾಹಿಯನ್ನೂ, ಅಣುಯುದ್ಧ ಮಾಡುವ ಅದರ ತಯಾರಿಯನ್ನೂ ವಿರೋಧಿಸಲು ಮುಂದೆ ಬಂದಿರುವುದು ಸಮಾಧಾನಕಾರಕವಾಗಿದೆ. ಮಾರ್ಚ್ 14, 1984 ರಂದು ದಿಲ್ಲಿಯಲ್ಲಿ ನೆರೆದಿದ್ದ ಸಮಾವೇಶ ಅತಿ ಮಹತ್ವದ್ದಾಗಿತ್ತು. ಆ ಸಮಾವೇಶದ ನಿರ್ಣಯವನ್ನು ಮುಂದಕ್ಕೊಯ್ಯಲು ಕ್ರಮ ವಹಿಸುವುದು ಅಗತ್ಯ.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸಲು ಎಲ್ಲಾ ಪ್ರಯತ್ನ ನಡೆದಿರುವುದು ಸಮಾಧಾನದ ವಿಷಯ. ಶ್ರೀನಗರ ಮತ್ತು ಕಲ್ಕತ್ತ ಸಮಾವೇಶಗಳಲ್ಲಿಪಾಲ್ಗೊಂಡು ಕೇಂದ್ರ-ರಾಜ್ಯ ಸಂಬಂಧ ಹಾಗೂ 11 ಬೇಡಿಕೆಗಳ ಕಾರ್ಯಕ್ರಮದ ಸಲುವಾಗಿ ಒಮ್ಮತಕ್ಕೆ ಬಂದ ವಿರೋಧ ಪಕ್ಷಗಳೇ ಈ ಪ್ರಯತ್ನ ನಡೆಸಿವೆ. ಸಾಮ್ರಾಜ್ಯಶಾಹಿ ವಿರೋಧಿ, ಯುದ್ಧ ವಿರೋಧಿ' ಸರ್ವಾಧಿಕಾರಿ ವಿರೋಧಿಯಾಗಿ ಎಲ್ಲ ತರದ ಛಿದ್ರಕಾರಿ, ಪ್ರತ್ಯೇಕವಾದಿಗಳ ವಿರುದ್ಧ ದೇಶದ ಐಕ್ಯತೆ ಮತ್ತು ಆಸುಕಲನಕ್ಕೆ ಭಾಗೀದಾರರಾಗುವಂಥಒಂದು ಸರ್ವಸಾಮಾನ್ಯ ಕಾರ್ಯಕ್ರಮಕ್ಕೆ ಈ ಪಕ್ಷಗಳೆಲ್ಲ ಒಪ್ಪಿಕೊಳ್ಳುತ್ತವೆಂದು ಅಪೇಕ್ಷಿಸುತ್ತೇವೆ.

ಸಿಪಿಐ (ಎಂ) ಕೇಂದ್ರ ಸಮಿತಿಗೆ ಖಾಯಂ ಆಗಿ ಆರಿಸಲ್ಪಟ್ಟ ಸದಸ್ಯರ ಹೆಸರು

1. ಎಂ. ಎಂ. ಲಾರೆನ್ಸ್, 2. ರಾಮಚಂದ್ರನ್ ಪಿಳ್ಳೆ, 3. ಕೆ. ಎಂ. ದೇವೇಂದ್ರ ನಾಥ [ಕೇರಳ], 4. ಬಿಮನ್ ಬೋಸ್, 5. ಬುದ್ಧದೇವಭಟ್ಟಾಚಾರ್ಯ, ಮಹಮ್ಮದ್ ಅಮೀನ್ [ಪ. ಬಂಗಾಲ],7, ಮಾಣಿಕ ಸರಕಾರ್ [ತ್ರಿಪುರ], 8 ಸುಭೋದ ರಾಯ್, 9. ನಂದಕಿಶೋರ ಶುಕ್ಲಾ [ಬಿಹಾರ],10. ಕೋಮಲದಾಸ್ [ಅಸ್ಸಾಂ], 11. ಅಜಯ್ ರಾವುತ [ಒರಿಸ್ಸಾ]. 12. ಪಿ. ಆರ್. ಪರಮೇಶ್ವರನ್ [ತಮಿಳುನಾಡು], 13. ರಘುಬೀರ ಸಿಂಗ್ ಹುಡ್ಡ [ಹರಿಯಾಣ], 14. ಸೀತಾರಾಂ ಎಚ್ಯೂರಿ, 15. ಸುಕುಮೋಲಸೇನ, 16. ಸುನೀಲ ಮೊಯಿತ್ರಾ.

ಇವರನ್ನು ಸಿ. ಪಿ. ಐ. [ಎಂ]ಕೇಂದ್ರ ಸಮಿತಿಗೆ ಖಾಯಂ ಸದಸ್ಯರನ್ನಾಗಿ ಆರಿಸಲಾಗಿದೆ.

ಇವರಲ್ಲದೆ ಈಗಾಗಲೇ 5 ರಾಜ್ಯಗಳಿಂದ ಪಾರ್ಟಿ ಕಾರ್ಯದರ್ಶಿಗಳನ್ನು ಖಾಯಂ ಆಮಂತ್ರಿತರನ್ನಾಗಿ ಮಾಡಲಾಗಿದೆ. ಪಿ. ರಾಮಚಂದ್ರ ರಾವ್ [ಕರ್ನಾಟಕ] ಹರಿರಾಂ ಚವಾಣ[ರಾಜಾಸ್ಥಾನ] ಮೋತಿಲಾಲ ಶರ್ಮ[ಮಧ್ಯಪ್ರದೇಶ] ಮಹಮ್ಮದ್ ಯುಸೂಫ್ [ಜಮ್ಮು-ಕಾಶ್ಮೀರ] ಪ್ರಕಾಶ್ ಕಾರಟ್ [ದಿಲ್ಲಿ]

ಅಕ್ಟೋಬರ್ ಕ್ರಾಂತಿ ಮತ್ತು ರಶ್ಯಾದಲ್ಲಿ ದೇಶೀಯ ಸಮಸ್ಯೆಯ ಪರಿಹಾರ

ಕೆ. ವಿ.

ನವಂಬರ್ 7, 1917 ಶೋಷಿತ ಜನತೆಯ ವಿಮೋಚನೆಯ ಸಿದ್ಧಾಂತವಾದ ಮಾರ್ಕ್ಸ್‌ವಾದದ ಮಾರ್ಗದರ್ಶನದಲ್ಲಿ ಸೋವಿಯತ್ ರಶ್ಯಾದಲ್ಲಿ ಸಮಾಜವಾದೀ ಪ್ರಭುತ್ವ ಜನ್ಮ ತಾಳಿದ ದಿನ. ಹೊಸ ಸಮಾಜ ವ್ಯವಸ್ಥೆಯನ್ನು ಹೊಸಕಿ ಹಾಕಲು ಜಗತ್ತಿನ ಎಲ್ಲಾ ಸಾಮ್ರಾಜ್ಯಶಾಹೀ ಶಕ್ತಿಗಳು ನಡೆಸಿದ ಪ್ರಯತ್ನಗಳನ್ನು ಧಿಕ್ಕರಿಸಿ ಧೀರೋದಾತ್ತವಾಗಿ ಮುನ್ನಡೆದು ಜನಜೀವನದ ಎಲ್ಲಾ ರಂಗಗಳಲ್ಲೂ ಸಾಧಿಸಿದ ಯಶಸ್ಸು ಜಗತ್ತಿನ ಉಳಿದ ದೇಶಗಳ ಜನತೆಯಲ್ಲಿ ಸಮಾಜವಾದೀ ಸಿದ್ಧಾಂತದ ಕುರಿತು ಹೊಸ ಆಸೆಗಳನ್ನು ಚಿಗುರಿಸಿತು. ಇಂದಿಗೂ ಮತ್ತು ಎಂದೆಂದಿಗೂ ಹೋರಾಟಗಾರರಿಗೆ ಸ್ಫೂರ್ತಿ ನೀಡುವ ರಶ್ಯಾದ ಕ್ರಾಂತಿಯ ಘಟನೆ ಒಂದು ಚಿರಂತನ ನೆನಪು. ಸೋವಿಯತ್ ನಾಡಿನ ಒಂದು ಪ್ರಮುಖ ಪ್ರಶ್ನೆಯಾಗಿದ್ದ ದೇಶೀಯತೆಯ ಪ್ರಶ್ನೆಯನ್ನು ಮಾರ್ಕ್ಸ್‌ವಾದೀ—ಲೆನಿನ್ ವಾದೀ ಸಿದ್ಧಾಂತಗಳ ಆಧಾರದಲ್ಲಿ ಹೇಗೆ ಪರಿಹರಿಸಲಾಯಿತು ಎಂಬುದರ ಕುರಿತಾದ ಲೇಖನವನ್ನು ಈ ಸಂದರ್ಭದಲ್ಲಿ ಪ್ರಕಟಿಸುತ್ತಿದ್ದೇವೆ.

ವಿವಿಧ ಭಾಷಾ-ಸಾಂಸ್ಕೃತಿಕ ಗುಂಪುಗಳು, ಜನಾಂಗಗಳು ಹಾಗೂ ದೇಶಗಳ ನಡುವೆ ಸಮಾನತೆ, ಸೋದರಭಾವ ಮತ್ತು ನಿಕಟ ಸಹಕಾರ ಏರ್ಪಡುವಂತೆ ಮಾಡುವುದು ಹೇಗೆ ಎನ್ನುವುದು ಈಗಿನ ಜಗತ್ತಿನ ಒಂದು ಪ್ರಮುಖ ಪ್ರಶ್ನೆ. ಈ ರೀತಿಯ ವಿಭಜನೆಗಳು ಶಾಶ್ವತವಾದ್ದರಿಂದ ಈ ದೇಶಿಯ ಪ್ರಶ್ನೆಯ ಪರಿಹಾರ ಸಾಧ್ಯವಿಲ್ಲ ಎನ್ನುವುದು "ವ್ಯವಹಾರ ಬುದ್ಧಿ"ಯ ಬೂರ್ಜ್ವಾ ಪಂಡಿತರ ಅಭಿಪ್ರಾಯ. ಮಾರ್ಕ್ಸ್‌ವಾದ ಇದನ್ನು ಒಪ್ಪುವುದಿಲ್ಲವಾದರೂ, ಬಂಡವಾಳಶಾಹಿಯ, ಸಾಮ್ರಾಜ್ಯಶಾಹಿಯ ಆಳ್ವಿಕೆ ಇರುವವರೆಗಂತೂ ಇದು ಖಂಡಿತಾ ಸಾಧ್ಯವಿಲ್ಲ ಎನ್ನುತ್ತದೆ. ವಿವಿಧ ಜನ ಸಮೂಹಗಳು ನಿಜವಾಗಿಯೂ ಒಂದಾಗ ಬೇಕಾದರೆ ಅದರ ಹಿತಾಸಕ್ತಿಗಳು ಸಮಾನವಾಗಿರಬೇಕು; ಹಿತಾಸಕ್ತಿಗಳು ಸಮಾನವಾಗಬೇಕಾದರೆ ಸದ್ಯದ ಆಸ್ತಿ ಸಂಬಂಧಗಳು ನಾಶವಾಗಬೇಕು. ಯಾಕೆಂದರೆ ಒಂದು ಜನಸಮೂಹದ ಮೇಲೆ ಇನ್ನೊಂದರ ಪ್ರಾಬಲ್ಯ ಅಥವಾ ದಮನದ ಮೂಲ ಈ ಆಸ್ತಿ ಸಂಬಂಧಗಳೇ. ಆದ್ದರಿಂದ ದೇಶೀಯ ಸಮಸ್ಯೆಗೆ ಪರಿಹಾರ ಸಾಧ್ಯ ಮತ್ತು ಈಗಿನ ಆಸ್ತಿ ಸಂಬಂಧಗಳು ನಾಶವಾದಾಗ ಅರ್ಥಾತ್ ಸಮಾಜವಾದದ ವಿಜಯದೊಂದಿಗೆ ಮಾತ್ರ ಅದು ಸಾಧ್ಯ ಎನ್ನುತ್ತದೆ ಮಾರ್ಕ್ಸ್‌ವಾದ.

ಸುಮಾರು ಎರಡು ವರ್ಷಗಳ ಹಿಂದೆ 1982ರ ಡಿಸೆಂಬರ್ ತನ್ನ ಸ್ಥಾಪನೆಯ 60ನೇ ವಾರ್ಷಿಕೋತ್ಸವ ಆಚರಿಸಿದ ಸೋವಿಯತ್ ಸಂಘದ ಸಾಧನೆ ಮಾರ್ಕ್ಸ್‌ವಾದದ ಈ ನಿಲುವಿನ ಋಜುತ್ವಕ್ಕೆ ಜೀವಂತ ಸಾಕ್ಷಿ. ಅತ್ತ ಬಂಡವಾಳಶಾಹೀ ದೇಶಗಳಲ್ಲಿ, ಮಾನವ ಹಕ್ಕುಗಳ ಬಗ್ಗೆ ಬೊಬ್ಬೆ ಹಾಕುವ ರಾಷ್ಟ್ರಗಳಲ್ಲಿ ಈ ದೇಶೀಯ ಸಮಸ್ಯೆ ಇನ್ನೂ ಪರಿಹಾರ ಕಂಡಿಲ್ಲ. ಅಮೇರಿಕಾದಲ್ಲಿ ಕರಿಯರ ಹಾಗೂ ವರ್ಣೀಯರ ಸ್ಥಿತಿ, ಬ್ರಿಟಿಶ್ ಸಾಮ್ರಾಜ್ಯಶಾಹಿಗಳಿಂದ ಐರ್ಲೆಂಡ್ ಹೋರಾಟದ ದಮನ, ಬ್ರಿಟನ್ನಿನಲ್ಲೇ ವರ್ಣೀಯರ ವಿರುದ್ಧ ಸತತ ಹಲ್ಲೆಗಳು, ಕೆನಡಾದ ಫ್ರೆಂಚ್ ಮಾತನಾಡುವ ಹಾಗೂ ಇಂಗ್ಲೀಷ್ ಮಾತನಾಡುವ ಜನರ ನಡುವೆ ಅಸಮಾನತೆ, ಬೆಲ್ಜಿಯಂನಲ್ಲಿ ವಾಲೂನ್ ಹಾಗೂ ಫ್ಲೆಮಿಂಗ್ ಈ ಗುಂಪುಗಳ ನಡುವಿನ ಸಮಸ್ಯೆ ಇತ್ಯಾದಿ ಹಲವು ಉದಾಹರಣೆಗಳನ್ನು ಕೊಡಬಹುದು. ಭಾರತದಂತಹ ನವವಿಮೋಚಿತ ತೃತೀಯ ಜಗತ್ತಿನ ದೇಶಗಳಲ್ಲಿ ಈ ಸಮಸ್ಯೆ ಯಾವ ರೂಪ ತಳೆದಿದೆ ಎಂಬುದಂತೂ ನಮಗೆ ಗೊತ್ತೇ ಇದೆ.

ಅದ್ಭುತ ಸಾಧನೆಯ ಆಧಾರ

ಈ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ ಝಾರ್‌ಶಾಹಿಯಡಿಯಲ್ಲಿ ದಮನಕ್ಕೊಳಗಾಗಿದ್ದ ನೂರಕ್ಕೂ ಹೆಚ್ಚು ದೇಶೀಯ ಗುಂಪುಗಳು, ಜನಾಂಗಗಳು ಸ್ವಯಿಚ್ಛೆಯಿಂದ ಸಮಾನತೆಯ ಮೂಲಕ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಂಡು ಪ್ರಗತಿ ಪಥದಲ್ಲಿ ಸತತವಾಗಿ ಮುನ್ನಡೆಯುತ್ತಿರುವುದು ಒಂದು ಅದ್ಭುತ ಸಂಗತಿ. ಇದು ಹೇಗೆ ಸಾಧ್ಯವಾಯಿತು. ?

ಇದನ್ನು ಸಾಧ್ಯಗೊಳಿಸಿದ ಅಂಶಗಳು ಮುಖ್ಯವಾಗಿ ಎರಡು- ಮೊದಲನೆಯದಾಗಿ, 1917ರ ಅಕ್ಟೋಬರ್-ನವಂಬರ್ ತಿಂಗಳಲ್ಲಿ ಪೆಟ್ರೋಗ್ರಾಡ್ [ಈಗ ಲೆನಿನ್‌ಗ್ರಾಡ್]ನ ಬೀದಿಗಳಲ್ಲಿ ಹೋರಾಡಿ ಇಂದಿನಿಂದ 67 ವರ್ಷಗಳ ಹಿಂದೆ ನವಂಬರ್ 7 ರಂದು ರಶ್ಯಾದ ಕಾರ್ಮಿಕ ವರ್ಗ ಸಾಧಿಸಿದ ಸಮಾಜವಾದೀ ಕ್ರಾಂತಿ ವರ್ಗ ಶೋಷಣೆಯನ್ನು ಅಂತ್ಯಗೊಳಿಸಿ, ಉತ್ಪಾದನಾ ಸಾಧನಗಳನ್ನು ಸಾಮಾಜಿಕ ಒಡೆತನಕ್ಕೆ ತಂದು ದೇಶೀಯ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾದ ಬುನಾದಿಯನ್ನು ಹಾಕಿಕೊಟ್ಟಿತು. ಎರಡನೆಯದಾಗಿ, ದೇಶೀಯ ಸಮಸ್ಯೆಯ ಬಗ್ಗೆ ವೈಜ್ಞಾನಿಕವಾದ ಮಾರ್ಕ್ಸ್‌ವಾದೀ—ಲೆನಿನ್‌ವಾದೀ ದೃಷ್ಟಿಕೋನ ಬೆಳೆಸಿಕೊಂಡಿದ್ದ ಬೋಲ್ಶೆವಿಕ್ ಪಕ್ಷದ ನೇತೃತ್ವ.

ವರ್ಗಶೋಷಣೆ ಕೊನೆಗೊಳ್ಳದೆ ವಿವಿಧ ಜನಾಂಗಗಳು, ದೇಶಗಳು ಪರಸ್ಪರ ಹತ್ತಿರ ಬರುವುದು ಸಾಧ್ಯವಿಲ್ಲವೆಂಬುದು ನಿಜ ಅದೇ ಹೊತ್ತಿಗೆ ವಿವಿಧ ಜನ ಸಮೂಹಗಳ ನಡುವಿನ ಸಂಬಂಧಗಳ ಪ್ರಶ್ನೆಯ ಬಗ್ಗೆ ಸರಿಯಾದ ಗಮನ ಹರಿಸದಿದ್ದರೆ ಮೂಲಭೂತ ಸಾಮಾಜಿಕ ಪರಿವರ್ತನೆ ಸಾಧ್ಯವಿಲ್ಲ ಎಂಬುದೂ ಅಷ್ಟೇ ನಿಜ. ಸಮಾಜವಾದದ ಹೋರಾಟದ ನೇತೃತ್ವ ವಹಿಸಿದ್ದ ಬೋಲ್ಶೆವಿಕರಿಗೆ ಇದು ಚೆನ್ನಾಗಿ ತಿಳಿದಿತ್ತು.

ಅಂತರ್‌ರಾಷ್ಟ್ರೀಯ ದೃಷ್ಟಿಕೋನ

ಆದ್ದರಿಂದಲೇ ಬೂರ್ಜ್ವಾ ಆಳ್ವಿಕೆಯ ನೊಗವನ್ನು ಕಿತ್ತೊಗೆಯಲು ಕಾರ್ಮಿಕ ವರ್ಗದ ಹೋರಾಟ ನಡೆಸಬೇಕೆಂದು ಪಣ ತೊಟ್ಟಿರುವ ಕಮ್ಯೂನಿಸ್ಟ್ ಪಕ್ಷ ದೇಶೀಯ ಪ್ರಶ್ನೆಗೆ ಸಂಬಂಧಪಟ್ಟಂತೆ ಕೂಡಾ ತನ್ನ ಧೋರಣೆಗಳನ್ನು ನಿರ್ದಿಷ್ಟ ಚಾರಿತ್ರಿಕ ಸನ್ನಿವೇಶದ ಕರಾರುವಾಕ್ಕಾದ ವಿಶ್ಲೇಷಣೆ, ಮುಖ್ಯತಃ ಆರ್ಥಿಕ ಪರಿಸ್ಥಿತಿಗಳನ್ನು ಆಧರಿಸಿಯೇ ರೂಪಿಸಬೇಕೇ ವಿನಃ ಅಮೂರ್ತ ನೀತಿಗಳ ಆಧಾರದ ಮೇಲಲ್ಲ" ಎಂಬ ಲೆನಿನ್ ಬೋಧನೆಗೆ ಅನುಸಾರವಾಗಿ ಹೋರಾಟದ ಪ್ರತಿಯೊಂದು ಘಟ್ಟದಲ್ಲೂ ಸರಿಯಾದ ನಿಲುವು ತಳೆದು ದಮನಕ್ಕೊಳಗಾಗಿದ್ದ ಜನಾಂಗಗಳ, ದೇಶೀಯ ಗುಂಪುಗಳ ಕಾರ್ಮಿಕವರ್ಗದ ವಿಶ್ವಾಸಗಳಿಸಲು ಬೋಲ್ಶೆವಿಕ್ ಪಕ್ಷಕ್ಕೆ ಸಾಧ್ಯವಾಯಿತು.

1917 ರಲ್ಲಿ ಕಾರ್ಮಿಕ ವರ್ಗ ಅಧಿಕಾರ ಪಡೆಯುವ ಎಷ್ಟೋ ಮೊದಲೇ ಬೋಲ್ಶೆವಿಕ್ ಪಕ್ಷ ದೇಶೀಯ ಪ್ರಶ್ನೆಯ ಬಗ್ಗೆ ಸತತ ವೈಜ್ಞಾನಿಕ ವಿಶ್ಲೇಷಣೆ ನಡೆಸುತ್ತಾ ಬಂದಿತ್ತು. 1894 ರಿಂದ 1903ರ ಮಧ್ಯೆ ಲೆನಿನ್ ಹಲವು ಲೇಖನಗಳನ್ನು ಬರೆದು ದೇಶಗಳ ಉದ್ಭವ ಹಾಗೂ ಬೆಳವಣಿಗೆಯ ಬಗ್ಗೆ ದೇಶೀಯ ಪ್ರಶ್ನೆಯ ಪರಿಹಾರದಲ್ಲಿ ಕಾರ್ಮಿಕ ವರ್ಗದ ಪಾತ್ರದ ಬಗ್ಗೆ ಪಕ್ಷದ ಪರಿಕಲ್ಪನೆಗಳನ್ನು ರೂಪಿಸಿದ್ದರು.

ಬೋಲ್ಶೆವಿಕ್ ಪಕ್ಷ ತನ್ನ ಹೆಸರು ಹಾಗೂ ಸಂಘಟನೆಯ ಸ್ವರೂಪದ ಬಗ್ಗೆ ಪಕ್ಷದೊಳಗೆ ನಡೆಸಿದ ಹೋರಾಟದೊಂದಿಗೇ ಸೋವಿಯೆಟ್ ಸಂಘದ ಬಹುದೇಶೀಯ ಪ್ರಭುತ್ವದ ಸ್ಥಾಪನೆಯ ಹೋರಾಟವನ್ನು ಆರಂಭಿಸಿತು ಎನ್ನಬಹುದು. ಬೋಲ್ಶೆವಿಕ್ ಪಕ್ಷದ ರಚನೆ ಅಂತರ್‌ರಾಷ್ಟ್ರೀಯವಾದದ ಮೇಲೆ ಆಧರಿಸಬೇಕು ಮಾತ್ರವಲ್ಲ ಹಾಗೆಂದು ಅದು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯುವಂತಿರಬೇಕು ಎಂದರು ಲೆನಿನ್ ಪಕ್ಷದ 'ಎರಡನೇ ಸಮ್ಮೇಳನದಲ್ಲಿ. ಪಕ್ಷದ ಸಂಘಟನೆಯ ಸ್ವರೂಪದ ಬಗ್ಗೆ ನಡೆದ ತೀವ್ರ ಚರ್ಚೆಯಲ್ಲಿ ಕೆಲವರು ಬೋಲ್ಶೆವಿಕ್ ಪಕ್ಷ ವಿವಿಧ ದೇಶೀಯ ಪಕ್ಷಗಳ ಒಕ್ಕೂಟವಾಗಿ ಕೆಲಸ ಮಾಡಬೇಕು ಎಂದು ವಾದಿಸಿದರು. ಆದರೆ ಈ ರೀತಿ ಮಾಡಿದರೆ ತಮ್ಮ-ತಮ್ಮ ದಾರಿಯಲ್ಲೇ ಮುನ್ನಡೆಯುವ ಪಕ್ಷಗಳನ್ನು ರಚಿಸಿಕೊಂಡು ಆದಾಗಲೇ ಅಂತರ್‌ರಾಷ್ಟ್ರೀಯ ಸ್ವರೂಪ ಪಡೆದಿರುವ ಸಾಮ್ರಾಜ್ಯಶಾಹಿಯೆದುರು "ನಮ್ಮ ಸವಾಲಿನ ಸಾಮರ್ಥ್ಯವನ್ನು ಕುಗ್ಗಿಸಿದಂತಾಗುತ್ತದೆ" ಎಂದು ಲೆನಿನ್ ವಿವರಿಸಿದರು.

ಆದ್ದರಿಂದ "ಕಾರ್ಮಿಕರ ಪಕ್ಷ ಒಂದು ಏಕೈಕ ಕೇಂದ್ರೀಕೃತ ಸಂಘಟನೆಯಾಗಿ ದುಡಿದು ಜನಾಂಗ, ದೇಶ, ಭಾಷೆಯ ಭೇದಭಾವವಿಲ್ಲದೆ ಸಮಸ್ತ ಕಾರ್ಮಿಕ ವರ್ಗದ ಬೆಂಬಲ ಪಡೆಯುವಂತಾಗಬೇಕು. ಕಾರ್ಯತಂತ್ರ ಹಾಗೂ ಸಂಘಟನೆಯ ಸಮಸ್ಯೆಗಳನ್ನು ಜಂಟಿಯಾಗಿ ಪರಿಹರಿಸುತ್ತಲೇ ಅದರ ಐಕ್ಯತೆ ಬೆಸೆದುಕೊಳ್ಳಬೇಕು" ಎಂದು ಲೆನಿನ್ ವಿವರಿಸಿದರು. ಹೀಗೆ ಈ ಸಮ್ಮೇಳನ ಅಂತರ್‌ರಾಷ್ಟ್ರೀಯತೆಯನ್ನು ಆಧರಿಸಿದ ಹೊಸ ಮಾದರಿಯ ಪಕ್ಷಕ್ಕೆ ನಾಂದಿ ಹಾಕಿತು. ಇದು ಮುಂದೆ ಸೋವಿಯೆತ್ ಸಂಘದ ಸ್ಥಾಪನೆಗೆ ನೆರವಾದ ಒಂದು ಪ್ರಮುಖ ಅಂಶವಾಯಿತು.

ಸ್ವಯಂ ನಿರ್ಧಾರದ ಹಕ್ಕು

ಝಾರ್ ಶಾಹಿಯ ದಮನ ನೀತಿಯಿಂದಾಗಿ ಝಾರ್ ಕಾಲದ ರಶ್ಯನ್ ಸಾಮ್ರಾಜ್ಯದಲ್ಲಿದ್ದ ಹಲವಾರು ದೇಶೀಯ ಗುಂಪುಗಳಲ್ಲಿ ಝಾರ್ ಶಾಹಿಯ ವಿರುದ್ಧ ಆಂದೋಲನ ಹುಟ್ಟಿಕೊಳ್ಳುತ್ತಿದ್ದವು. ಆದರೆ ಝಾರ್ ಶಾಹಿ ವಿವಿಧ ದೇಶೀಯ ಗುಂಪುಗಳ ಕಾರ್ಮಿಕ ವರ್ಗಗಳ ನಡುವೆ ದೇಶೀಯ ಆಧಾರದ ಮೇಲೆ ಒಡಕು ತರುವ ಪ್ರಯತ್ನ ನಡೆಸುತ್ತಿತ್ತು. ಫಲವಾಗಿ ಆ ದೇಶದ ಕಾರ್ಮಿಕ ವರ್ಗಗಳಲ್ಲಿ ರಶ್ಯನ್ ಜನತೆ ಹಾಗೂ ಸಂಸ್ಕೃತಿಯ ಬಗ್ಗೆಯೇ ದ್ವೇಷ ಉಂಟಾಗಿದ್ದರೆ, ಅತ್ತ ಪರಿಸ್ಥಿತಿಯ ದುರ್ಲಾಭ ಪಡೆದು ಸ್ಥಳೀಯ ಬೂರ್ಜ್ವಾ ಹಾಗೂ ಕಿರಿಬೂರ್ಜ್ವಾ ಪಕ್ಷಗಳು ಸಂಕುಚಿತ ದೇಶೀವಾದವನ್ನು ಹರಡುತ್ತಿದ್ದವು. ಇನ್ನೂ ಸಾಮಾಜಿಕ, ಆರ್ಥಿಕವಾಗಿ ಊಳಿಗಮಾನ್ಯ ಅಥವಾ ಅದಕ್ಕೂ ಹಿಂದಿನ ಮಟ್ಟದಲ್ಲಿದ್ದ ಮಧ್ಯ ಏಶಿಯಾದ ದೇಶಗಳಲ್ಲಿ ಈ ವಿರೋಧ ಇಸ್ಲಾಮೀತನದ ರೂಪ ತಳೆದಿತ್ತು.

ಈ ಕ್ಲಿಷ್ಟ ಸನ್ನಿವೇಶದ ಹಿನ್ನೆಲೆಯಲ್ಲಿ ಬೋಲ್ಶೆವಿಕ್ ಪಕ್ಷ ಹೋರಾಟದ ಬೂರ್ಜ್ವಾ-ಪ್ರಜಾಪ್ರಭುತ್ವ ಹಂತದ ತನ್ನ ಕಾರ್ಯಕ್ರಮದಲ್ಲಿ ದೇಶೀಯ ಪ್ರಶ್ನೆಗೆ ಸಂಬಂಧಪಟ್ಟಂತೆ ಕೆಲವು ಮೂರ್ತ ಸೂಚನೆಗಳನ್ನು ಮುಂದಿಟ್ಟಿತು. ಇದರಲ್ಲಿ ಸ್ವಯಂ-ನಿರ್ಧಾರದ ಹಕ್ಕು ಪ್ರಮುಖವಾದುದು. ಯಾವುದೇ ದೇಶೀಯ ಗುಂಪಿನ, ಕಿರುಕುಳಕ್ಕೊಳಗಾದ ಧಾರ್ಮಿಕ ಗುಂಪಿನ ಹಾಗೂ ದಲಿತ ಸಾಮಾಜಿಕ ಗುಂಪಿನ ಸಮಾನತಾ ಹೋರಾಟಕ್ಕೆ ಪೂರ್ಣ ಬೆಂಬಲ ನೀಡುವುದು. ಝಾರ್‌ಶಾಹೀ ವಿರುದ್ಧ ಕ್ರಾಂತಿಕಾರಿ ಆಂದೋಲನದ ಮುನ್ನಡೆಯ ದೃಷ್ಟಿಯಿಂದ ಹಾಗೂ ಪ್ರಜಾಪ್ರಭುತ್ವವಾದೀ ಗಣತಂತ್ರ ವ್ಯವಸ್ಥೆಯ ದೃಷ್ಟಿಯಿಂದ ಅತ್ಯಗತ್ಯ ಎಂದು ಅದು ನಿರ್ಧರಿಸಿತು. ಈ ಸಂದರ್ಭದಲ್ಲೇ ಅದು ಪ್ರತಿಯೊಂದು ದೇಶೀಯ ಗುಂಪಿಗೆ ಸ್ವಯಂ-ನಿರ್ಧಾರದ ಹಕ್ಕು ಇರಬೇಕೆಂದು ಪ್ರತಿಪಾದಿಸಿತು.

ವಿಶಾಲ ತಳಹದಿಯ ರಚನೆ

ಇದಕ್ಕೆ ಝಾರ್‌ಶಾಹೀ-ಪರವಾದ ಅತಿ ಬಲಪಂಥೀಯದಿಂದ ಹಿಡಿದು ಝಾರ್‌ಶಾಹಿಗೆ ವಿರುದ್ಧವಾಗಿದ್ದ ಎಡಪಂಥೀಯರೆನಿಸಿಕೊಂಡವರವರೆಗೆ ಎಲ್ಲರೂ ತಮ್ಮ ವಿರೋಧ ವ್ಯಕ್ತಪಡಿಸಿದರು. ಇದು ರಶ್ಯಾದ ವಿಘಟನೆಗೆ ಕಾರಣವಾಗುತ್ತದೆಂದು ಅವರು ವಾದಿಸಿದರು, ಆದರೆ ಈ ವಾದ ಹೇಗೆ ಕ್ರಾಂತಿ-ವಿರೋಧೀ, ಪ್ರತಿಕ್ರಿಯಾವಾದೀ ಹೋರಾಟ ಎನ್ನುವುದನ್ನು ಲೆನಿನ್ ತೋರಿಸಿಕೊಟ್ಟರು. ಬದಲಿಗೆ ಈ ಹಕ್ಕನ್ನು ನಿರಾಕರಿಸಿದರೆ ದಮನಕ್ಕೊಳಗಾಗಿದ್ದ ದೇಶೀಯ ಗುಂಪುಗಳ ಅನಿರ್ಬಂಧಿತ ಬೆಳವಣಿಗೆಯ ಆಶೋತ್ತರಗಳಿಗೆ ಅಡ್ಡಿಯುಂಟಾಗಿ, ರಶ್ಯಾದ ಸಂಕುಚಿತ ರಾಷ್ಟ್ರವಾದದಿಂದಾಗಿ ಆಗಲೇ ಅವರಲ್ಲಿ ಹುಟ್ಟಿಕೊಂಡಿದ್ದ ದ್ವೇಷ ಇನ್ನಷ್ಟು ಬೆಳೆದು ರಶ್ಯಾದ ಕಾರ್ಮಿಕವರ್ಗ ಹಾಗೂ ಜನತೆಯ ಬಗ್ಗೆ ಅವಿಶ್ವಾಸ ಹೆಚ್ಚಬಹುದು; ಫಲವಾಗಿ ಅಲ್ಲಿನ ದುಡಿಯುವ ಜನತೆಯನ್ನು ಸ್ಥಳೀಯ ಸಂಕುಚಿತ ದೇಶೀವಾದಿಗಳ ಬಾಹುಗಳತ್ತ ದೂಡಿದಂತಾಗಬಹುದು. ಪರಿಣಾಮವಾಗಿ, ದೇಶೀಯ ಅಸಂತುಷ್ಟಿ ಹೆಚ್ಚಿ ಅದು ರಶ್ಯಾದ ವಿಘಟನೆಗೆ ಕಾರಣವಾಗಬಹುದು ಎಂದು ಲೆನಿನ್ ವಿವರಿಸಿದರು. ತದ್ವಿರುದ್ಧವಾಗಿ ಸ್ವಯಂ-ನಿರ್ಧಾರದ ಹಕ್ಕನ್ನು ಪ್ರತಿಪಾದಿಸಿದರೆ, ಸಮಾನತೆಯ ಹೋರಾಟಗಳಿಗೆ ಬೆಂಬಲ ನೀಡಿದರೆ ಅವರಿಗೆ ಅಂತರ್‌ರಾಷ್ಟ್ರೀಯತೆಯ ಶಿಕ್ಷಣ ನೀಡಿದಂತಾಗಿ, ಅಲ್ಲಿನ ಕ್ರಾಂತಿಕಾರೀ ಶಕ್ತಿಗಳ, ಕಾರ್ಮಿಕ ವರ್ಗದ ಬೆಂಬಲ ದೊರೆತು ಸಾಮಾಜಿಕ ಕ್ರಾಂತಿಯ ತಳಹದಿ ವಿಶಾಲಗೊಳ್ಳುತ್ತದೆ ಎಂದರು ಲೆನಿನ್. ಲೆನಿನ್ನರ ಈ ಭವಿಷ್ಯವಾಣಿ ಸಂಪೂರ್ಣವಾಗಿ ನಿಜವಾಯಿತು.

ಬೋಲ್ಶೆವಿಕ್ ಪಕ್ಷ ಈ ಬಗ್ಗೆ ತನ್ನ ನಿಲುವನ್ನು ನಂತರ ಪ್ರಥಮ ಮಹಾ-

ಯುದ್ಧದ ಅವಧಿಯಲ್ಲಿ ನಡೆದ ಪೊರೋನಿನ್ ಸಮ್ಮೇಳನದಲ್ಲಿ ಪುನರುಚ್ಚರಿಸಿತು ಮಾತ್ರವಲ್ಲ ಸ್ವಯಂ-ನಿರ್ಧಾರದ ಹಕ್ಕು ಎಂದರೆ ಅದರಲ್ಲಿ ಪ್ರತ್ಯೇಕಗೊಳ್ಳುವ ಹಕ್ಕು ಕೂಡಾ ಇದೆಯೆಂದು ಹೇಳಿದಾಗ ಸಂಬಂಧಪಟ್ಟ ಎಲ್ಲರಿಗೂ ಅದರ ನಿಲುವಿನ ಪ್ರಾಮಾಣಿಕತೆ ಚೆನ್ನಾಗಿ ಮನದಟ್ಟಾಯಿತು. ಪ್ರತ್ಯೇಕಗೊಳ್ಳ ಬಯಸಿದ ದೇಶೀಯ ಗುಂಪುಗಳಿಗೆ ಪ್ರಾದೇಶಿಕ ಸ್ವಾಯತ್ತತೆ, ಸ್ಥಳೀಯ ಸ್ವಯಮಾಧಿಕಾರ ಇರಬೇಕೆಂದೂ ಸಮ್ಮೇಳನ ಘೋಷಿಸಿತು.

ಸಮಸ್ತ ದುಡಿಯುವ ಜನಗಳ ಬೆಂಬಲ

ಈ ರೀತಿ ಘೋಷಿಸುವುದರ ಜತೆಗೇ ವಿವಿಧ ಬೂರ್ಜ್ವಾ ಹಾಗೂ ಕಿರಿಬೂರ್ಜ್ವಾ ದೇಶೀವಾದಗಳ ಸಂಕುಚಿತತೆಯನ್ನು ಬಯಲಿಗೆಳೆಯುವುದನ್ನು, ಅವುಗಳ ವಿರುದ್ಧ ಹೋರಾಟ ನಡೆಸಿ ರಶ್ಯಾದ ಹಾಗೂ ಇತರ ದೇಶೀಯ ಗುಂಪುಗಳ ಕಾರ್ಮಿಕ ವರ್ಗಕ್ಕೆ ಈ ಬಗ್ಗೆ ಸರಿಯಾದ ಶಿಕ್ಷಣ ನೀಡುವುದನ್ನೂ ಬೋಲ್ಶೆವಿಕರು ಮರೆಯಲಿಲ್ಲ.

ಕಾರ್ಮಿಕ ವರ್ಗದ ಪ್ರಜಾಪ್ರಭುತ್ವದಲ್ಲಿ ಯಾವುದೇ ಒಂದು ದೇಶೀಯ ಗುಂಪಿಗೆ, ಭಾಷೆಗೆ ಯಾವುದೇ ವಿಶೇಷ ಅಧಿಕಾರಗಳಿಲ್ಲ; ಎಲ್ಲರಿಗೂ ಸ್ವಯಂ-ನಿರ್ಧಾರದ ಹಕ್ಕು; ವಿವಿಧ ಭಾಷಾ ಜನಾಂಗಗಳ, ದೇಶೀಯ ಗುಂಪುಗಳ ಕಾರ್ಮಿಕ ವರ್ಗದ ಬೇಷರತ್ ಐಕ್ಯತೆ- ಹೀಗಿತ್ತು ಬೋಲ್ಶೆವಿಕರು ರೂಪಿಸಿದ ದೇಶೀಯ ಕಾರ್ಯಕ್ರಮ. ಈ ಕಾರ್ಯಕ್ರಮದ ಮೂಲಕ ಸಾಮ್ರಾಜ್ಯಶಾಹೀ ಜಾಗತಿಕ ಯುದ್ಧವನ್ನು ರಶ್ಯಾದಲ್ಲಿ ಅಂತರ್ಯುದ್ಧವನ್ನಾಗಿ ಮಾರ್ಪಡಿಸಿ ವಿವಿಧ ದೇಶೀಯ ಗುಂಪುಗಳ ದುಡಿಯುವ ಜನತೆಯ ಬೆಂಬಲ ಪಡೆಯುವುದು ಅವರಿಗೆ ಸಾಧ್ಯವಾಯಿತು.

ಸಮಾಜವಾದೀ ಕ್ರಾಂತಿಯ ನಂತರ

1917ರ ಅಕ್ಟೋಬರ್ ಕ್ರಾಂತಿಯ ಯಶಸ್ಸಿನೊಂದಿಗೆ ತಮ್ಮ ಈ ಕಾರ್ಯಕ್ರಮವನ್ನು ತಕ್ಷಣ ಅವರು ಜ್ಯಾರಿಗೊಳಿಸಲಾರಂಭಿಸಿದರು. ಪೆಟ್ರೋಗ್ರಾಡಿನ ಸೋವಿಯೆತ್ ಸರಕಾರ ಹೊರಡಿಸಿದ ಶಾಂತಿಯ ಡಿಕ್ರಿ ಹಾಗೂ ಜಮೀನಿನ ಕುರಿತಾದ ಡಿಕ್ರಿಯ ಮೂಲಕ ಜನಸಾಮಾನ್ಯರ ನಡುವೆ ದೇಶೀಯ ಸಮಾನತೆಯ ವಿಚಾರಗಳನ್ನು ಹರಡಲಾಯಿತು. ಮಾತ್ರವಲ್ಲ, "ರಶ್ಯಾದ ಜನಸಮೂಹಗಳ ಹಕ್ಕುಗಳ ಘೋಷಣೆ" "ರಶ್ಯಾ ಹಾಗೂ ಪೂರ್ವದ ದುಡಿಯುವ ಮುಸ್ಲಿಮರಿಗೆ", "ದುಡಿಯುವ ಹಾಗೂ ಶೋಷಿತ ಜನತೆಯ ಹಕ್ಕುಗಳ ಘೋಷಣೆ ಇತ್ಯಾದಿ ಚಾರಿತ್ರಿಕ ಘೋಷಣೆಗಳ ಮೂಲಕ ಮಾಜೀ ರಶ್ಯನ್ ಸಾಮ್ರಾಜ್ಯದ ಎಲ್ಲಾ ದೇಶೀಯ ಗುಂಪುಗಳಿಗೆ ಸ್ವಾತಂತ್ರ್ಯ, ಸ್ವಾಧೀನತೆ, ಸಮಾನತೆ ಹಾಗೂ ಸಾರ್ವಭೌಮತ್ವದ ಭರವಸೆ ನೀಡಲಾಯಿತು.

ಇದು ಕೇವಲ ಪುಸ್ತಕದ ಘೋಷಣೆಯಾಗಿರದೆ ಪ್ರಾಮಾಣಿಕ ಭರವಸೆಯನ್ನುವುದೂ ಕೆಲವೇ ದಿನಗಳಲ್ಲಿ ಸಾಬೀತಾಯಿತು. ಝೂರ್‌ಶಾಹೀ ಹಾಗೂ ತಾತ್ಕಾಲಿಕ ಬೂರ್ಜ್ವಾ ಸರಕಾರ ಈ ದೇಶೀಯ ಗುಂಪುಗಳ ದಮನಕ್ಕಾಗಿ ಬೇರೆ ಸಾಮ್ರಾಜ್ಯಶಾಹೀ ದೇಶಗಳೊಂದಿಗೆ ಮಾಡಿಕೊಂಡಿದ್ದ ಗುಪ್ತ ಒಪ್ಪಂದಗಳನ್ನು ಪ್ರಕಟಗೊಳಿಸಿ, ಅವನ್ನು ರದ್ದುಗೊಳಿಸಲಾಯಿತು. 1917 ರ ಡಿಸೆಂಬರ್ 3 ರಂದು ಯುಕ್ರೇನ್‌ನ ಸ್ವಯಂ-ನಿರ್ಧಾರದ ಹಕ್ಕನ್ನು, ಡಿಸೆಂಬರ್ 8 ರಂದು ಫಿನ್‌ಲ್ಯಾಂಡಿನ ಹಕ್ಕನ್ನು, ಡಿಸೆಂಬರ್ 23 ರಂದು ಎಸ್ಟೋನಿಯಾ, ಲ್ಯಾಟ್ವಿಯಾ ಹಾಗೂ ಲಿಥುವಾನಿಯಾದ ಹಕ್ಕನ್ನು, ಡಿಸೆಂಬರ್ 29 ರಂದು ಆರ್ಮೇನಿಯಾದ ಹಕ್ಕನ್ನು ಮಾನ್ಯ ಮಾಡಲಾಯಿತು. ಮಧ್ಯ ಏಷ್ಯಾದ ದೇಶಗಳು ಸ್ವಲ್ಪ ತಡವಾಗಿ ತಮ್ಮ ಸ್ವಯಮಾಧಿಕಾರದ ಹಕ್ಕನ್ನು ಘೋಷಿಸಿದವು. ಅವನ್ನೂ ತಕ್ಷಣ ಮಾನ್ಯ ಮಾಡಲಾಯಿತು.

ಸೋವಿಯಟ್ ಸ್ವಾಯತ್ತತೆಯ ಆಧಾರ

ಕಾರ್ಮಿಕ ವರ್ಗದ, ರೈತಾಪಿ ವರ್ಗದ, ಸೈನಿಕರ ಸಂಘಟನೆಗಳ ಸದಸ್ಯರು ಚುನಾಯಿಸಿದ ಸಂಸ್ಥೆಗಳಾದ ಸೋವಿಯಟ್‌ಗಳ ಸ್ವಾಯತ್ತತೆ ಒಂದು ಉತ್ತಮ ಮಾದರಿಯ ಪ್ರಜಾಪ್ರಭುತ್ವ ಎಂದು ಲೆನಿನ್ ಮನಗಂಡಿದ್ದರು. ಆದ್ದರಿಂದಲೇ ಒಂದು ವಿಶಿಷ್ಟ ಸಂಸ್ಕೃತಿ, ಭಾಷೆ, ಜೀವನ ಶೈಲಿ ಹೊಂದಿದ್ದ ಪ್ರತಿಯೊಂದು ದೇಶೀಯ ಗುಂಪಿಗೂ, ಅದು ಜನಸಂಖ್ಯೆಯ ಅಥವಾ ಕ್ಷೇತ್ರದ ದೃಷ್ಟಿಯಿಂದ ಎಷ್ಟೇ ಚಿಕ್ಕದಾಗಿದ್ದರೂ, ಸೋವಿಯೆಟ್ ಸ್ವಾಯತ್ತತೆಯನ್ನು ನೀಡಲಾಯಿತು. ಅವರವರ ಸಾಮಾಜಿಕ—ಆರ್ಥಿಕ ಹಾಗೂ ಸಾಂಸ್ಕೃತಿಕ ಮಟ್ಟಕ್ಕೆ ಅನುಗುಣವಾಗಿ ಈ ಸ್ವಾಯತ್ತತೆ ವಿವಿಧ ಸ್ವರೂಪಗಳಾಗಿತ್ತು. ಅವುಗಳಲ್ಲಿ ಸ್ವತಂತ್ರ ಗುಣತಂತ್ರಗಳಿದ್ದವು. ಸ್ವಾಯತ್ತ ಪ್ರದೇಶಗಳಿದ್ದವು; ಸ್ವಾಯತ್ತ ಕ್ಷೇತ್ರಗಳಿದ್ದವು, ಕೆಲವೆಡೆ ಸ್ವಾಯತ್ತ ಜಿಲ್ಲೆಗಳೂ ಇದ್ದವು. ಒಂದು ನಿರ್ದಿಷ್ಟ ದೇಶೀಯ ಗುಂಪಿನ ಬೆಳವಣಿಗೆಗೆ ಅನುಸಾರವಾಗಿ ಅದರ ಸ್ವಾಯತ್ತತೆಯ ಸ್ವರೂಪವೂ ಬದಲಾಗುವ ಅವಕಾಶವಿತ್ತು.

ಹೀಗೆ ರಶ್ಯಾದ ವಿವಿಧ ದೇಶೀಯ ಗುಂಪುಗಳ ವಿಭಿನ್ನತೆಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳಬಲ್ಲ ಈ ಸೋವಿಯೆಟ್ ವ್ಯವಸ್ಥೆ ಈ ಹಿಂದೆ ಯಾವುದೇ ರೀತಿಯ ಪ್ರಭುತ್ವವನ್ನೂ ಕಂಡರಿಯದ ಹಿಂದುಳಿದ ಜನಾಂಗಗಳಿಗೆದುರು ಕೂಡಾ ಬೆಳವಣಿಗೆಯ ಅಪಾರ ಅವಕಾಶಗಳನ್ನು ತೆರೆದಿಟ್ಟು, ತಮ್ಮದೇ ಆದ ಪ್ರಭುತ್ವ, ಭಾಷೆ, ಸಂಸ್ಕೃತಿಯನ್ನು ಅಭಿವೃದ್ಧಿ ಪಡಿಸಿಕೊಂಡು ಜನಸಾಮಾನ್ಯರನ್ನು ಸ್ಥಳೀಯ ಸ್ವಯಮಾಡಳಿತದಲ್ಲಿ, ಸಮಾಜವಾದೀ ರಚನೆಯಲ್ಲಿ ತೊಡಗಿಸಲು ಅವಕಾಶ ಮಾಡಿಕೊಟ್ಟಿತು. ದೇಶೀಯ ಸಮಸ್ಯೆಯ ಪರಿಹಾರದಲ್ಲಿ ಇದು ಒಂದು ಮುಖ್ಯ ಹೆಜ್ಜೆಯಾಗಿತ್ತು.

ಐಕ್ಯಭಾವನೆಯ ವಿಕಾಸ

ಹೀಗೆ ಸ್ವಯಮಾಧಿಕಾರ ದೇಶೀಯ ಸಮಸ್ಯೆಯ ಪರಿಹಾರದ ಒಂದು ಅಂಶವಾಗಿದ್ದರೆ ಈ ಸ್ವಾಯತ್ತ ದೇಶೀಯ ಗುಂಪುಗಳ ಉನ್ನತ ಮಟ್ಟದ ಐಕ್ಯತೆ ಅವರ ಇನ್ನೊಂದು ಅಂಶವಾಗಿತ್ತು. ಅಕ್ಟೋಬರ್ ಕ್ರಾಂತಿಯ ನಾಲ್ಕು ತಿಂಗಳ ಮೊದಲು, ಅಂದರೆ ಫೆಬ್ರವರಿಯ ಬೂರ್ಜ್ವಾ—ಪ್ರಜಾಪ್ರಭುತ್ವ ಕ್ರಾಂತಿಯ ನಂತರ ನಡೆದ ಬೊಲ್ಶೆವಿಕ್ ಪಕ್ಷದ ಏಪ್ರಿಲ್ ಸಮ್ಮೇಳನದಲ್ಲಿ ಭವಿಷ್ಯದ ಕಾಯಕ್ರಮವನ್ನು ಮುಂಡಿಸುತ್ತಾ ಲೆನಿನ್ " ಕಾರ್ಮಿಕರ ಪಕ್ಷ ಸಾಧ್ಯವಾದಷ್ಟು ದೊಡ್ಡ ಪ್ರಭುತ್ವ. ಸೃಷ್ಟಿಸ ಬಯಸುತ್ತದೆ ಯಾಕೆಂದರೆ ಇದು ಕಾರ್ಮಿಕ ವರ್ಗಕ್ಕೆ ಅನುಕೂಲಕರ. ದೇಶಗಳನ್ನು ಪರಸ್ಪರ ನಿಕಟ ತಂದು ಅವುಗಳನ್ನು ಮತ್ತಷ್ಟು ಬೆಸೆಯಲು ಕಾರ್ಮಿಕ ವರ್ಗ ಪ್ರಯತ್ನಿಸುತ್ತದೆ ಆದರೆ ಇದನ್ನು ಅದು ಹಿಂಸೆಯಿಂದ ಸಾಧಿಸಬಯಸುವುದಿಲ್ಲ ಬದಲಾಗಿ ಎಲ್ಲಾ ದೇಶೀಯ ಗುಂಪುಗಳ ಅನಿರ್ಬಂಧಿತ ಸೋದರ ಸಂಘದ ಮೂಲಕವಷ್ಟೇ ಸಾಧಿಸಬಯಸುತ್ತದೆ." ಎಂದು ಘೋಷಿಸಿದರು.

ಸೋವಿಯೆತ್ ಬಹುದೇಶೀಯ ಪ್ರಭುತ್ವದ ಸ್ಥಾಪನೆ ಹಲವು ಘಟ್ಟಗಳಲ್ಲಿ ವಿಕಸಿತಗೊಳ್ಳುತ್ತಾ ಬಂತು. ಒಕ್ಕೂಟ ನೀತಿಯನ್ನು ಆಧರಿಸಿ 19.8ರ ಜುಲೈಯಲ್ಲಿ ರಶ್ಯನ್ ಸೋಶಲಿಸ್ಟ್ ಫೆಡರೇಟಿವ್ ಸೋವಿಯೆಟ್ ರಿಪಬ್ಲಿಕ್ [RSFSR] ಸ್ಥಾಪನೆ ಈ ದೃಷ್ಟಿಯಲ್ಲಿ ಅತ್ಯಂತ ಮಹತ್ತ್ವಪೂರ್ಣ ಘಟನೆ RSFSR ನ ಸರಕಾರ ವಿವಿಧ ಜನಸಮೂಹಗಳಿಗೆ ತಮ್ಮದೇ ಆದ ಪ್ರಭುತ್ವ ವಿಕಾಸಗೊಳಿಸುವಲ್ಲಿ ನೀಡಿದ ಅಪಾರ ನೆರವು, ಅವರಿಗೆ ತಮ್ಮ ಸಂಸ್ಕೃತಿ ಹಾಗೂ ಅರ್ಥ ವ್ಯವಸ್ಥೆಯನ್ನು ಬೆಳೆಸುವಲ್ಲಿ ಒದಗಿಸಿದ ಸಾಲ, ಇತರ ಸಲಕರಣೆಗಳು ಹಾಗೂ ಆಹಾರ ಸಾಮಗ್ರಿ, ನಿಪುಣ ಸಿಬ್ಬಂದಿ ಪಡೆ ರಶ್ಯಾದ ಬಗ್ಗೆ ಅವರಲ್ಲಿದ್ದ ಹಳೆಯ ದ್ವೇಷವನ್ನು ಅಳಿಸಿಹಾಕಿ ರಶ್ಯಾದ ಕಾರ್ಮಿಕವರ್ಗ ಹಿಂದೆ ದಮನಕ್ಕೊಳಗಾಗಿದ್ದ ಎಲ್ಲಾ ದೇಶೀಯ ಗುಂಪುಗಳ ಸಮಸ್ತ ಕ್ರಾಂತಿಕಾರೀ ಶಕ್ತಿಗಳ ವಿಶ್ವಾಸವನ್ನು ಗಳಿಸಲು ನೆರವಾಯಿತು.

ಮಿಲಿಟರಿ ಸಹಕಾರ

ಅಕ್ಟೋಬರ್ ಕ್ರಾಂತಿಯ ಹೊತ್ತಿಗೆ ಸ್ವತಂತ್ರವಾದ ವಿವಿಧ ಸೋವಿಯೆಟ್ ಗಣತಂತ್ರಗಳು ತಮ್ಮ ದೇಶಗಳೊಳಗೆ ಪ್ರತಿಕ್ರಿಯಾವಾದೀ ಶಕ್ತಿಗಳ ಹಾಗೂ ಹೊರಗಿನಿಂದ ಸಾಮ್ರಾಜ್ಯ ಶಾಹಿ ಶಕ್ತಿಗಳ ಹಲ್ಲೆಗಳನ್ನು ಎದುರಿಸಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ಬೋಲ್ಶೆವಿಕ್ ಪಕ್ಷ ಕಾರ್ಮಿಕರ ನಡುವೆ ಮಾಡಿದ ಬಹುಮುಖೀ ಕೆಲಸ ಹಾಗೂ ಕಾರ್ಮಿಕ ವರ್ಗಕ್ಕೆ ಅದು ನೀಡಿದ ಶಿಕ್ಷಣ ವಿವಿಧ ಸೋವಿಯೆಟ್ ಗಣತಂತ್ರಗಳ ನಡುವೆ ಮಿಲಿಟರಿ ಸಹಕಾರ ಏರ್ಪಡಲು ಹಾದಿ ಮಾಡಿಕೊಟ್ಟಿತು. ಇದು ಐಕ್ಯತೆಯ ವಿಕಾಸದ ಹಾದಿಯಲ್ಲಿ ಮೊದಲ ಹಂತವಾಗಿತ್ತು.

> "ಜನತೆಯ ಐಕ್ಯತೆ ರೂಬಲ್‌ನ ಬಲದಮೇಲಲ್ಲ, ಅಧಿಕಾರದಂಡದ ಬಲದಿಂದಲ್ಲ, ಹಿಂಸೆಯ ಮೂಲಕವಲ್ಲ, ಸ್ವಯಮಿಚ್ಛೆಯ ಒಪ್ಪಂದ ಹಾಗೂ ಶೋಷಕರ ವಿರುದ್ಧ ಜನತೆಯ ಸೌಹಾರ್ದದ ಬಲದ ಮೇಲೆ. ಎಲ್ಲಾ ದೇಶೀಯ ಗುಂಪುಗಳಿಗೆ ಸಮಾನ ಹಕ್ಕು ಎನ್ನುವುದು ಬೂರ್ಜ್ವಾ ವರ್ಗದ ಮಟ್ಟಿಗೆ ಒಂದು ಮೋಸ. ಆದರೆ ನಮಗೆ ಅದು ಎಲ್ಲಾ ದೇಶೀಯ ಗುಂಪುಗಳನ್ನು ನಮ್ಮ ಕಡೆ ತ್ವರಿತವಾಗಿ ಗೆದ್ದು ಕೊಳ್ಳಲು ಅನುವು ಮಾಡಿಕೊಡುವ ಸತ್ಯ".
>
> —ಲೆನಿನ್

ಬೆಳವಣಿಗೆಯ ಮುಂದಿನ ಹಂತದಲ್ಲಿ ವಿವಿಧ ಗಣತಂತ್ರಗಳು ಮಿಲಿಟರಿ ದೃಷ್ಟಿಯಿಂದ ಮಾತ್ರವಲ್ಲ, ಆರ್ಥಿಕವಾಗಿಯೂ ಪರಸ್ಪರ ಸಹಕರಿಸುವ ಆವಶ್ಯಕತೆಯನ್ನು ಮನಗಂಡವು ಇದರ ಫಲವಾಗಿ ಹಲವು ಸೋವಿಯೆಟ್ ಗಣತಂತ್ರಗಳ ನಡುವೆ ಪರಸ್ಪರ ಒಪ್ಪಂದಗಳು ಏರ್ಪಟ್ಟವು ಹಿಂದೆ ಹೇಳಿದಂತೆ ಇಲ್ಲಿ ರಶಿಯನ್ ಗಣತಂತ್ರ (RSFSR)ದ ಪಾತ್ರ ಮಹತ್ತ್ವದ್ದಾಗಿತ್ತು. ರಶಿಯನ್ ಸೋವಿಯೆಟ್ ಗಣತಂತ್ರ ಹಾಗೂ ಯುಕ್ರೇನಿಯನ್ ಸೋವಿಯೆಟ್ ಗಣತಂತ್ರದ ನಡುವೆ ಒಂದು ಒಪ್ಪಂದ ಏರ್ಪಡುವುದರೊಂದಿಗೆ ವಿವಿಧ ಸೋವಿಯೆಟ್ ಗಣತಂತ್ರಗಳು ಐಕ್ಯತೆಯ ಹೊಸ ಮಜಲನ್ನು ತಲುಪಿದವು.

ಸೋವಿಯೆಟ್ ಸಂಘದ ಸ್ಥಾಪನೆ

ಅಂತರ್ಯುದ್ಧ ಮುಗಿದ ಮೇಲೆ, ಯುದ್ಧದ ಪರಿಣಾಮವಾಗಿ ಅಸ್ತವ್ಯಸ್ತಗೊಂಡಿದ್ದ ಅರ್ಥ ವ್ಯವಸ್ಥೆಯನ್ನು ಸುಧಾರಿಸಲು ಸೋವಿಯೆಟ್ ಗಣತಂತ್ರಗಳು ಪ್ರಯತ್ನಿಸುತ್ತಿದ್ದಾಗ ಅತ್ತ ಸಾಮ್ರಾಜ್ಯ ಶಾಹೀ ಶಕ್ತಿಗಳು ಆರ್ಥಿಕ ದಿಗ್ಬಂಧನ ವಿಧಿಸಿ, ರಾಜತಾಂತ್ರಿಕ ಉಪಾಯಗಳನ್ನು ಬಳಸಿ, ಈ ಗಣತಂತ್ರಗಳ ಸ್ವತಂತ್ರ ಅಸ್ತಿತ್ವದ ಸಂದರ್ಭವನ್ನು ದುರುಪಯೋಗ ಪಡಿಸಿಕೊಳ್ಳಲು ಯತ್ನಿಸಲಾರಂಭಿಸಿದರು. ಆಗ ಈ ಗಣತಂತ್ರಗಳು ಅಂತರ್ರಾಷ್ಟ್ರೀಯ ರಂಗದಲ್ಲಿಯೂ ಪರಸ್ಪರ ಸಹಕರಿಸುವುದು ಅಗತ್ಯ ಎಂಬ ನಿರ್ಧಾರಕ್ಕೆ ಬಂದವು. 1922ರಲ್ಲಿ ಜಿನೋವಾದಲ್ಲಿ ನಡೆದ ಯುರೋಪಿಯನ್ ಆರ್ಥಿಕ ಸಮ್ಮೇಳನದಲ್ಲಿ ಹಾಗೂ ನಂತರ ಹೇಗ್‌ನಲ್ಲಿ ನಡೆದ ಸಮ್ಮೇಳನದಲ್ಲಿ ರಶಿಯನ್ ಗಣತಂತ್ರದ ನೇತೃತ್ವದಲ್ಲಿ ಈ ಎಲ್ಲಾ ಗಣತಂತ್ರಗಳ ಜಂಟೀ ನಿಯೋಗ ಭಾಗವಹಿಸಿ ಸಾಮ್ರಾಜ್ಯ ಶಾಹಿಗಳ ತಂತ್ರವನ್ನು ವಿಫಲಗೊಳಿಸುವುದು ಸಾಧ್ಯವಾಯಿತು. ಇದು ಸೋವಿಯೆಟ್ ಗಣತಂತ್ರಗಳ ಐಕ್ಯತೆಯನ್ನು ಇನ್ನೂ ಒಂದು ಹಂತ ಮೇಲಕ್ಕೆ ಒಯ್ಯಿತು.

ಈ ಹೊತ್ತಿಗಾಗಲೇ ಪ್ರತಿಕ್ರಿಯಾವಾದಿಗಳ ಹಾಗೂ ಸಾಮ್ರಾಜ್ಯ ಶಾಹಿಗಳ ಹಲ್ಲೆಗಳನ್ನು ವಿಫಲಗೊಳಿಸುವಲ್ಲಿ, ಸಮಾಜವಾದೀ ರಚನೆಯ ಕೆಲಸದಲ್ಲಿ ಪರಸ್ಪರ ಸಹಕರಿಸುವಲ್ಲಿನ ಅನುಭವಗಳ ಮೂಲಕ ಎಲ್ಲಾ ಸೋವಿಯೆತ್ ಗಣತಂತ್ರಗಳು ಉಚ್ಚಮಟ್ಟದ ಐಕ್ಯತೆಯ ಬಗ್ಗೆ ಯೋಚಿಸಲಾರಂಭಿಸಿದ್ದವು, ಆದರೆ ಇದನ್ನು ಹೇಗೆ ಸಾಧಿಸುವುದು ಎಂಬುದೇ ಸಮಸ್ಯೆಯಾಗಿತ್ತು. ವಿವಿಧ ಗಣತಂತ್ರಗಳ ಕಮ್ಯೂನಿಸ್ಟ್ ಪಕ್ಷಗಳಲ್ಲಿ ಈ ಬಗ್ಗೆ ತೀವ್ರ ಚರ್ಚೆಗಳು ನಡೆದವು. ಕೊನೆಗೆ ಸ್ಟಾಲಿನರ ಅಧ್ಯಕ್ಷತೆಯಲ್ಲಿದ್ದ ತಾತ್ಕಾಲಕ ಸಮಿತಿ ಎಲ್ಲಾ ಗಣತಂತ್ರಗಳು ಸ್ವಾಯತ್ತತೆಯ ನೀತಿಯ ಆಧಾರದ ಮೇಲೆ ರಶ್ಯನ್ ಸೋವಿಯೆತ್ ಗಣತಂತ್ರದಲ್ಲಿ ಸೇರಿಕೊಳ್ಳಬೇಕೆಂದು ಸೂಚಿಸಿತು. ಆದರೆ ಇಲ್ಲಿ ಸಮಾನತೆಯ ನೀತಿಗೆ ಅವಕಾಶವಿರಲಿಲ್ಲ. ಆದ್ದರಿಂದ ಯುಕ್ರೇನಿಯಾ, ಬೈಲೋ ರಷ್ಯಾ ಹಾಗೂ ಟ್ರಾನ್ಸ್ ಕಾಕೇಸಿಯಾದ ಗಣತಂತ್ರಗಳು ಇದಕ್ಕೆ ಒಪ್ಪಲಿಲ್ಲ. ಲೆನಿನ್ ಕೂಡಾ ಇದನ್ನು ಟೀಕಿಸಿ ಇದರಬದಲು ಎಲ್ಲಾ ಸೋವಿಯೆತ್ ಗಣತಂತ್ರಗಳು ಸೋವಿಯೆಟ್ ಸಮಾಜವಾದೀ ಗಣತಂತ್ರಗಳ ಸಂಘ (ಯು.ಎಸ್.ಎಸ್.ಆರ್.) ಎಂಬ ಹೊಸ ಐಕ್ಯ ಪ್ರಭುತ್ವದಲ್ಲಿ ಒಂದಾಗಬೇಕೆಂದು ಸೂಚಿಸಿದರು. ಇದರ ಪ್ರಕಾರ ಸಮಾನತೆಯ ಆಧಾರದ ಮೇಲೆ ಸ್ವಯಮಿಚ್ಛೆಯಿಂದ ರೂಪಗೊಂಡ ಸೋವಿಯೆತ್ ಸಂಘ 1922 ರ ಡಿಸೆಂಬರ್ 3 ರಂದು ಅಸ್ತಿತ್ವ ಬಂತು.

ಪ್ರೇರಕಾಂಶಗಳು

ಸೋವಿಯೆಟ್ ಸಂಘದ ಸ್ಥಾಪನೆಯು ಈ ಪ್ರಕ್ರಿಯೆ ದೇಶೀಯ ಸಮಸ್ಯೆಯ ಪರಿಹಾರದ ಬಗ್ಗೆ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ದೃಷ್ಟಿಕೋನದ ಸತ್ಯತೆಯನ್ನು ರುಜುವಾತು ಪಡಿಸಿದೆ ಎಂಬುದು ಸ್ಪಷ್ಟ. ಯಾಕೆಂದರೆ 1917 ರಲ್ಲಿ ಅಕ್ಟೋಬರ್ ಕ್ರಾಂತಿಯೊಂದಿಗೆ ಅಸ್ತಿತ್ವಕ್ಕೆ ಬಂದ ವಿವಿಧ ಸ್ವತಂತ್ರ ಗಣತಂತ್ರಗಳ ಜನತೆಯ ಹಿತಾಸಕ್ತಿಗಳು ಸಮಾನವಾಗಿದಿರು

[6ನೇ ಪುಟ ನೋಡಿ]

ಎ. ಕೆ. ಜಿ. ಭವನಕ್ಕೆ ಎಂ. ಎಸ್. ಕೆ. ಮಿಲ್ ಕಾರ್ಮಿಕರ ದೇಣಿಗೆ

ಗುಲ್ಬರ್ಗದ ಎಂ.ಎಸ್.ಕೆ. ಮಿಲ್ ಕಾರ್ಮಿಕರು ಎ.ಕೆ.ಜಿ. ಭವನಕ್ಕೆ ರೂ 613 ಸಂಗ್ರಹಿಸಿದ್ದು, ಸಿಪಿಐ (ಎಂ) ಅವರಿಗೆ ಅಭಿನಂದನೆ ಸಲ್ಲಿಸುತ್ತದೆ. ನಿಧಿ ಸಂಗ್ರಹ ಇನ್ನೂ ಹೆಚ್ಚು ಉತ್ಸಾಹದಿಂದ ಮುಂದುವರಿಯಬೇಕೆಂದು ನಮ್ಮ ಹಾರೈಕೆ.

ದೇಣಿಗೆ ಕೊಟ್ಟವರ ಹೆಸರು	ರೂಪಾಯಿ
ಅಬ್ದುಲ್ ಖಾದರ್ ಹನ್ನೂಭಾಯಿ	101
ನಿರ್ಮಲ ಸಿಂಗೇಗೌಡ	35
ಮರಿಯಪ್ಪ ಕಡೆಚೂರ	15
ತಿಮ್ಮಣ್ಣ ದೊಡ್ಡಮನಿ	35
ಪುಂಡಲಿಕ ಮೊಹಿತೆ	35
ಮಹಮ್ಮದ್ ಜಲಾಲ್	35
ದೇವೇಂದ್ರ ನಾಗನಹಳ್ಳಿ	51
ಶಾಂತಪ್ಪ ಸುಮಿತ್ರ	15
ಮಲ್ಲಿಂಗಪ್ಪ	15
ಅಬ್ದುಲ್ ಮನ್ನನ್ [ಹಯಾತ]	25
ಚಂದ್ರಕಾಂತ	10
ರಾಮಚಂದ್ರ ಬಸಪ್ಪ	20
ಮಧು	15
ಎಂ. ಜಿ. ಮೈಕಲ್	25
ಶೇಖ ಗುಡು	35
ಮಹಮ್ಮದ್ ಹುಸೇನ್	21
ಅಬ್ದುಲ್ ರಹೀಂ ಚುಟುಬಿ	15
ಬಾಬು ಸಿಂದಗಿ	10
ಸುಭಾಸ್ ಜೈರಾವ	5
ತಮ್ಮಣ್ಣ	10
ಶರಣಪ್ಪ ಭೀಮಶ	5
ಹನಮಂತ ಘುಸೂರ	10
ಪೋಲಪ್ಪ	5
ಸ್ವಾಬಣ್ಣ ಗೌಡಗೇರಿ	10
ಆನಂದಪ್ಪ ಬೋದಿನಹಾಳ	15
ಹನಮಂತ ಗೌಡಗೇರಿ	15
ದುರ್ಗಪ್ಪ ಸಿಪೂರ	15
ಬಹೋದ್ದೀನ್ ನಭಿ	10
	613

ಇತರರು :–

ಎಲ್.ಎಸ್. ನಾಯ್ಕ್, ಅಧ್ಯಕ್ಷ, ಕರ್ನಾಟಕ ಬಂಜಾರ್ ಎಜ್ಯುಕೇಶನ್ ಸೊಸೈಟಿ, ಸವದತ್ತಿ	50
ಉಡುಪಿ ಸಂಗಾತಿಗಳು	30
ಎಸ್. ವ್ಹಾ. ಗುರುಶಾಂತ, ಹೊಸಪೇಟೆ	5
ಸಹಾನುಭೂತಿದಾರರು, ಸಿಂಡಿಕೇಟ್ ಬ್ಯಾಂಕ್ ಬಳ್ಳಾರಿ	10
ಭಾರತ ಇಲೆಕ್ಟ್ರೋನಿಕ್ ಕೋ ಆಪರೇಟಿವ್ ಸೊಸೈಟಿ ಎಂಪ್ಲಾಯೀಸ್ ಯೂನಿಯನ್ ಬೆಂಗಳೂರು	100
ಜೆ. ಎಸ್. ಭಟ್, ಉಡುಪಿ ಸಂಗಾತಿಗಳ ಪರವಾಗಿ	50
ಕರ್ನಾಟಕ ಪ್ರೋಗ್ರೆಸ್ಸಿವ್ ಆರ್ಟ್ಸ್ ಕ್ಲಬ್ ಬೆಂಗಳೂರು	3000
ಎಂ. ಆರ್. ಶೆಣೈ, ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ಬೆಂಗಳೂರು	200
ಕೆ. ಆರ್. ಭಟ್	101
ಟಿ. ಕೆ. ರಾಜಗೋಪಾಲನ್	51
ಎ. ಪಿ. ಸೆಲ್ವಮ್	50
ಎನ್. ಆರ್. ಪುರುಶೋತ್ತಮ್ ನಾಯ್ಡು	100
ಕಬ್ಬಿಣದ ಮಹಾದೇವಪ್ಪ, ತುಮಕೂರು	50
ಡಾ|| ಐ. ಆರ್. ದುರ್ಗಾಪ್ರಸಾದ್, ವಿರಾಜಪೇಟೆ	100
ಬಿ. ಟಿ. ಜಗದೀಶ, ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್, ಬೆಂಗಳೂರು	100
ಗಣೇಶ, ಶಿವಮೊಗ್ಗ	10
ರಾಜ, ಸಿಪಿಐ [ಎಂ] ಟೌನ್ ಬ್ರಾಂಚ್, ಧಾರವಾಡ	50
ಎಸ್. ಶಿವರಾಂ, ಬೆಂಗಳೂರು	50

ಮನೆ ನಿವೇಶನಕ್ಕೆ ನೇಕಾರರ ಒತ್ತಾಯ

ಮನೆಯಿಲ್ಲದ ನೇಕಾರರಿಗೆ ಸರಕಾರ ಮನೆ ನಿವೇಶನ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ತಾ|| 15-10-1984 ರಂದು ಸೇರಿದ ಸೌತ್ ಕೆನರಾ ವೀವರ್ಸ್ ಯೂನಿಯನಿನ 45ನೇ ವಾರ್ಷಿಕ ಮಹಾಸಭೆಯಲ್ಲಿ ನಿರ್ಣಯಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಯೂನಿಯನಿನ ಅಧ್ಯಕ್ಷರಾದ ಕಾ|| ಕೆ. ತಿಮ್ಮಪ್ಪನವರು ವಹಿಸಿದ್ದರು. ಪ್ರಾರಂಭದಲ್ಲಿ ಯೂನಿಯನಿನ ಕಾರ್ಯದರ್ಶಿ ಸ್ವಾಗತಿಸಿ ಗತ ವರ್ಷದ ವರದಿಯನ್ನು ಸಭೆ ಮುಂದಿಟ್ಟರು.

ಮುಂದಿನ ವರ್ಷಕ್ಕೆ ಕಾ|| ಕೆ. ತಿಮ್ಮಪ್ಪ ಅಧ್ಯಕ್ಷರಾಗಿಯೂ ಕಾ. ವೀರಪ್ಪ, ಕೆ. ಮೂಸಬ್ಬ ಉಪಾಧ್ಯಕ್ಷರಾಗಿಯೂ, ಕೆ. ಪೂವಪ್ಪ ಸಾಲಿಯಾನ್ ಕಾರ್ಯದರ್ಶಿಯಾಗಿಯೂ, ಕೆ. ಪಕೀರ ಮತ್ತು ಎಂ. ಕೃಷ್ಣ ಶೆಟ್ಟಿ ಜೊತೆ ಕಾರ್ಯದರ್ಶಿಯಾಗಿಯೂ ಕೆ. ಮಾರಪ್ಪ ಕೋಶಾಧಿಕಾರಿಯಾಗಿಯೂ ಇರುವ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ದೇಶದ ಪರಿಸ್ಥಿತಿಯನ್ನು ವಿವರಿಸುತ್ತಾ, ಛಿದ್ರಕಾರಿ ಹಾಗೂ ಕೋಮುವಾದಿ ಶಕ್ತಿಗಳ ಬಗ್ಗೆ ಎಚ್ಚರಿಕೆಯನ್ನು ನೀಡಿ ಇಂತಹ ಶಕ್ತಿಗಳ ವಿರುದ್ಧ ಮಜೂರ ವರ್ಗ ಎಚ್ಚರವಾಗಿರಬೇಕೆಂದರು.

○

ಎ. ಕೆ. ಜಿ. ಸ್ಮಾರಕ ಭವನಕ್ಕೆ ಸಂಗ್ರಹವಾದ ಹಣ

ರಾಜ್ಯ	ಕೂಡಿಸಿದ ಹಣ	ಕೂಡಿಸ ಬೇಕಾಗಿದ್ದ ಹಣ
ಆಂಧ್ರಪ್ರದೇಶ	9,51,526	5,00 (0)
ಅಸ್ಸಾಂ	51,511	1,00,000
ಬಿಹಾರ	24,306	3,00,000
ದಿಲ್ಲಿ	81,562	50,000
ಗುಜರಾತ್	21,395	25,000
ಹಿಮಾಚಲ ಪ್ರದೇಶ	5,646	—
ಹರ್ಯಾಣ	13,736	50,000
ಗೋವ	1,050	—
ಕರ್ನಾಟಕ	37,360	50,000
ಕೇರಳ	10,12,947	15,00,000
ಮಧ್ಯಪ್ರದೇಶ	22,762	50,00)
ಮಹಾರಾಷ್ಟ್ರ	11,448	3,00,000
ಒರಿಸ್ಸಾ	22,433	—
ಪಂಜಾಬ್	68,645	3,00,000
ರಾಜಸ್ಥಾನ	7,275	50,000
ತಮಿಳುನಾಡು	1,35,299-70	5,00,000
ತ್ರಿಪುರ	40,455	3,00,000
ಉತ್ತರ ಪ್ರದೇಶ	27,713	2,00,000
ಪಶ್ಚಿಮ ಬಂಗಾಲ	15,04,455	20,00,000
ಮಣಿಪುರ	1,011	—
ಜಮ್ಮುಕಾಶ್ಮೀರ	440	—
ಪಾರ್ಟಿ ಕೇಂದ್ರ	19,486	—
ಇಂಗ್ಲೆಂಡ್	7,90,011-43	15,00,000
ಕೆನಡಾ	2,14,639	5,00,000
	50,67,112-13	82,75,000

ಅಕ್ಟೋಬರ್ 28 ರ ವರೆಗೆ 51,32,056-25

ಅಕ್ಟೋಬರ್ ಕ್ರಾಂತಿ ಮತ್ತು ರಶ್ಯಾದಲ್ಲಿ ದೇಶೀಯ ಸಮಸ್ಯೆಯ ಪರಿಹಾರ

(5ನೇ ಪುಟದಿಂದ)

ತ್ತಿದ್ದರೆ ಸಮಾನತೆಯನ್ನಾಧರಿಸಿದ್ದ ಒಂದು ಹೊಸ ಐಕ್ಯ ಪ್ರಭುತ್ವದ ಬಗ್ಗೆ ಬಹುಶಃ ಅವು ಯೋಚಿಸುವುದು ಸಾಧ್ಯವಾಗುತ್ತಿರಲಿಲ್ಲ.

ಅಲ್ಲದೆ ಸಮಾನತೆ ಎಂದು ಘೋಷಿಸಿದ ಮಾತ್ರಕ್ಕೇ ಸಮಾನತೆ ಬರುವುದಿಲ್ಲ. ಅದೂ ಹಳೆಯ ಝಾರ್‌ಶಾಹಿ ರಶ್ಯನ್ ಸಾಮ್ರಾಜ್ಯದಂತಹ ತೀವ್ರ ಅಸಮಾನತೆಯ ವ್ಯವಸ್ಥೆಯ ಹಿನ್ನೆಲೆಯಲ್ಲಿ. ಭಾರತದಂತಹ ದೇಶಗಳ ಜನ ಇದನ್ನು ಅನುಭವದಿಂದ ಕಂಡುಕೊಂಡಿದ್ದಾರೆ. ಲೆನಿನ್ ಹೇಳಿದಂತೆ ಹಳೆಯ ಅಸಮಾನತೆ ತೊಡೆದು ಹಾಕಲು ಹೊಸ ಅಸಮಾನತೆಯ ನಿಲುವು ಅಗತ್ಯವಾಗಿತ್ತು. ಅರ್ಥಾತ್ ಹಿಂದುಳಿದಿದ್ದ ಪ್ರದೇಶಗಳಿಗೆ ಜನಾಂಗಗಳಿಗೆ ವಿಶೇಷ ಗಮನ ಹರಿಸಬೇಕಾಗಿತ್ತು. ಈ ಹಿಂದಿನ "ಪ್ರಬಲ" ದೇಶೀಯ ಗುಂಪಿನ (ರಶ್ಯನ್)ಸರ್ಕಾರ ಮಾಡಿದ್ದ ಅವಮಾನ,ನಡೆಸಿದ್ದ ದಮನಗಳಿಂದಾಗಿ ರಶ್ಯನ್ನೇತರರಲ್ಲಿದ್ದ ಅವಿಶ್ವಾಸವನ್ನು ಸರಿದೂಗಿಸಲು ರಶ್ಯನರು ಹಲವು ರಿಯಾಯ್ತಿಗಳನ್ನು ನೀಡಬೇಕಾಗಿತ್ತು; ಹಲವು ತ್ಯಾಗಗಳನ್ನು ಮಾಡಬೇಕಾಗಿತ್ತು. ಹೊಸ ಐಕ್ಯ ಪ್ರಭುತ್ವದ ಸ್ಥಾಪನೆಯ ನಂತರ ಕೂಡಾ ಮಧ್ಯ ಏಶಿಯಾದ ಗಣತಂತ್ರಗಳಂತಹ ಹಿಂದುಳಿದ ದೇಶೀಯ ಗುಂಪುಗಳತ್ತ ವಿಶೇಷ ಗಮನ ನೀಡುವ ನೀತಿಯನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಪಾಲಿಸದಿರುತ್ತಿದ್ದರೆ. 1928 ರಲ್ಲಿ ಒಟ್ಟು ಕೈಗಾರಿಕಾ ಉತ್ಪಾದನೆಯಲ್ಲಿ ಕೇವಲ ಶೇಕಡ 2 ಪಾಲು ಹೊಂದಿದ್ದ ದೇಶೀಯ ಗುಂಪುಗಳು ಈಗ ಸಮಾನ ಸ್ಥಾನಮಾನ ಪಡೆಯುವುದು ಸಾಧ್ಯವಾಗುತ್ತಿರಲಿಲ್ಲ.

ನಮ್ಮ ದೇಶದ ಮೂರು ದಶಕಗಳ "ಯೋಜನೆಬದ್ಧ" ಬೆಳವಣಿಗೆಯ ನಂತರದ ಸ್ಥಿತಿಯೊಡನೆ ಹೋಲಿಸಿಕೊಂಡರೆ ವ್ಯತ್ಯಾಸ ಚೆನ್ನಾಗಿ ಅರ್ಥವಾಗುತ್ತದೆ. ಬ್ರಿಟಿಶ್ ಕಾಲದ ಅಸಮಾನ ಬೆಳವಣಿಗೆಯ ಪರಂಪರೆ ಮುಂದುವರಿದು ವಿವಿಧ ಭಾಷಾ ಜನಾಂಗಗಳಲ್ಲಿ, ಬುಡಕಟ್ಟುಗಳಲ್ಲಿ ಈಗ ಎಷ್ಟೊಂದು ಅಸಂತೃಪ್ತಿ ಹರಡಿದೆ ಯೆಂದರೆ ಸ್ವಾತಂತ್ರ್ಯ ಹೋರಾಟ ಕಾಲದ ಐಕ್ಯ ಮನೋಭಾವ ಹಿಂದಕ್ಕೆ ಸರಿದು ಸಂಕುಚಿತ ಪ್ರವೃತ್ತಿ ಪ್ರಬಲಗೊಳ್ಳುತ್ತಿದೆ.

ಅಕ್ಟೋಬರ್ ಕ್ರಾಂತಿ ಖಾಸಗೀ ಆಸ್ತಿಯನ್ನು ನಿರ್ಮೂಲಗೊಳಿಸಿ ಸಮಾಜವಾದದ ಹಾದಿಯಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಟ್ಟದ್ದು ಹಾಗೂ ದೇಶೀಯ ಸಮಾನತೆಯ ಹೋರಾಟದೊಡನೆ ಸಮಸ್ತ ಕಾರ್ಮಿಕ ವರ್ಗದ ಐಕ್ಯತೆಯ ಹೋರಾಟವನ್ನು ಸಮನ್ವಯಗೊಳಿಸುವ ಬೋಲ್ಶೆವಿಕ್ ಪಕ್ಷದ ಯಶಸ್ವೀ ಪ್ರಯತ್ನ ರಶ್ಯನ್ ಹಾಗೂ ರಶ್ಯನೇತರ ದುಡಿಯುವ ಜನತೆಯಲ್ಲಿ ತ್ಯಾಗ, ಸಮಾನತೆ ಹಾಗೂ ಐಕ್ಯತೆಯ ಭಾವನೆಗಳನ್ನು ಪ್ರೇರಿಸಿದ ಅಂಶಗಳು ಎನ್ನುವುದು ಸುಸ್ಪಷ್ಟ.

○

ವಿವಾಹ

ಎಸ್. ಆರ್. ಆರಾಧ್ಯ ಮತ್ತು ತೇಜಸ್ವಿನಿಯವರು 24-10-84 ರಂದು ಬೆಂಗಳೂರಿನಲ್ಲಿ ಜರುಗಿದ ತಮ್ಮ ವಿವಾಹದ ನೆನಪಿನ ಕಾಣಿಕೆಯಾಗಿ 'ಐಕ್ಯರಂಗ' ಕ್ಕೆ 25 ರೂ ವಂತಿಗೆ ನೀಡಿದ್ದಾರೆ. ಇವರಿಗೆ 'ಐಕ್ಯರಂಗ' ಶುಭಾಶಯಗಳನ್ನು ಕೋರುತ್ತದೆ.

ಆನಗಳ್ಳಿ ಗ್ರಾಮ ರೈತ ಸಂಘದ ಸಭೆ

ದ. ಕ. ಜಿಲ್ಲಾ ಕುಂದಾಪುರ ತಾಲೂಕು ಆನಗಳ್ಳಿಗ್ರಾಮ ರೈತರ ಸಭೆಯು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾ|| ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕು ರೈತ ಸಂಘದ ಜೊತೆ ಕಾರ್ಯದರ್ಶಿ ಕೋಣಿ ವೆಂಕಟೇಶರವರು ಸಭೆಯಲ್ಲಿ ಭಾಗವಹಿಸಿದ್ದರು. ಆರಂಭದಲ್ಲಿ ಕಾರ್ಯದರ್ಶಿ ಬಾಬು ಬಿಲ್ಲವನವರು ಹಿಂದಿನ ಚಟುವಟಿಕೆಯ ವರದಿಯನ್ನಿತ್ತರು.

ಆನಗಳ್ಳಿ, ಬಸ್ರೂರು ಗ್ರಾಮಕ್ಕೆ ಸೇರುವ ರಸ್ತೆಯು ದುರಸ್ತಿಯಲ್ಲಿದ್ದು ಜನ, ವಾಹನ ಸಂಚಾರಕ್ಕೆ ಅನಾನುಕೂಲವಿದ್ದು ಜಖಂಗೊಂಡಿದ್ದು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ವಿಧಾನಸಭಾ ಸದಸ್ಯರಿಗೂ ಗ್ರಾಮಸ್ಥರ ಸಾಮೂಹಿಕ ಮನವಿಯೊಂದನ್ನರ್ಪಿಸಿ ಶೀಘ್ರ ದುರಸ್ತಿ ಕಾರ್ಯ ಕೈಕೊಳ್ಳಲು ಒತ್ತಾಯಿಸುವ ನಿರ್ಣಯವೊಂದನ್ನು ಮಾಡಲಾಯಿತು.

ಬಸ್ರೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಖಾಯಂ ಶಾಖೆಯೊಂದನ್ನು ಆನಗಳ್ಳಿ ಗ್ರಾಮದಲ್ಲಿ ತೆರೆದು ದಿನ ಬಳಕೆ ಆಹಾರಧಾನ್ಯ ಮತ್ತು ಸಹಕಾರೀ ಸಾಲ ಸೌಲಭ್ಯವನ್ನು ರೈತರಿಗೆ ದೊರಕಿಸಲು, ಕಟ್ಟಿಗೆ ಡಿಪೋವನ್ನು ಕೂಡಲೇ ಸ್ಥಾಪಿಸುವಂತೆ ಒತ್ತಾಯಿಸಿ ಮನವಿಯನ್ನು ಕೊಡುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಮುಂದಿನ ಸಾಲಿಗೆ ಈ ಕೆಳಗಿನವರನ್ನು ಗ್ರಾಮ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ಬಾಬು ಬಿಲ್ಲವ [ಅಧ್ಯಕ್ಷ], ರಾಮ ಆನಗಳ್ಳಿ [ಕಾರ್ಯದರ್ಶಿ], ಎ. ಬಾಲ, ಅಣ್ಣಪ್ಪ ಪೂಜಾರಿ ಕಳಂಜಿ, ಶೀನಪೂಜಾರಿ ಬಸ್ರೂರು, ದೇವಪ್ಪ ಆನಗಳ್ಳಿ, ದೊಡ್ಡ ಬಸವ ಆನಗಳ್ಳಿ, ಜೂಜೆಕರವಲ ರಾಜುಪೂಜಾರಿ ಕಳಂಜಿ, ಸಣ್ಣ ಬಸವ, ನಾರಾಯಣಪೂಜಾರಿ, ರೋಬರ್ಟ್ [ಸದಸ್ಯರು]

ಪ್ರಸಕ್ತ ಸಾಲಿಗೆ ಗ್ರಾಮದಲ್ಲಿ 300 ಸದಸ್ಯತನ ಹಾಗೂ 100 ರೂ ನಿಧಿ ಸಂಗ್ರಹ ಮಾಡುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಮಾಜಿ ಗೇಣಿದಾರರಿಗೆ ಭೂ ಒಡೆತನ

ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ ಹಲವಾರು ವರ್ಷಗಳಿಂದ ಕೇಳಿಕೆಯನ್ನಿಟ್ಟು ಚಳವಳಿ ಮಾಡುತ್ತಾ ಬಂದಿರುವ ಗೇಣಿದಾರರಿಗೆ ಹಕ್ಕು ಪತ್ರ ಕೊಡಬೇಕು, ಪರಿಹಾರ ಧನ ಮನ್ನಾ ಮಾಡಬೇಕೆಂದು ಕೇಳಿರುವ ಕೇಳಿಕೆಯನ್ನು ರಾಮಕೃಷ್ಣ ಹೆಗ್ಡೆಯವರ ಜನತಾ ಸರ್ಕಾರ ಜ್ಯಾರಿಗೊಳಿಸಿದ್ದನ್ನು ದ. ಕ. ಜಿಲ್ಲಾ ರೈತ ಸಂಘದ ಕಾರ್ಯದರ್ಶಿಗಳಾದ ಯು. ಜನಾರ್ಧನ ನ್ಯಾಕ್ ಸ್ವಾಗತಿಸಿದ್ದಾರೆ. ನಮ್ಮ ರಾಜ್ಯದಲ್ಲಿದ್ದ ದ. ಕ. ಜಿಲ್ಲೆಯ ಹೆಚ್ಚಿನ ಸಂಖ್ಯೆಯಲ್ಲಿರುವ ಗೇಣಿದಾರರು ದರ್ಮಾರ್ಥವಾಗಿ ಭೂಮಿಯನ್ನು ಕೊಡಬೇಕೆಂದು ದೀರ್ಘ ಕಾಲ ಹೋರಾಟ ನಡೆಸಿ, ಮಂಗಳೂರಿನಿಂದ ಬೆಂಗಳೂರು ತನಕ ಎರಡು ಬಾರಿ ಕಾಲ್ನಡಿಗೆ ಜಾಥ ಮಾಡಿ ವಿಧಾನ ಸೌಧದ ಮುಂದೆ ಈ ಬೇಡಿಕೆಯ ಈಡೇರಿಕೆಗಾಗಿ ಪ್ರದರ್ಶನ ನಡೆಸಿದ್ದಾರೆ. ಈದೀಗ ರೈತರ ಉತ್ಪತ್ತಿಗೆ ಸರಿಯಾಗಿ ಬೆಲೆ ಸಿಗದೆ ಬಾರಿ ಕಷ್ಟವಲ್ಲಿರುವ ಈ ಸಂದರ್ಭದಲ್ಲಿ ಈ ಕಾನೂನು ಮಾಜಿ ಗೇಣಿದಾರರಿಗೆ ತುಂಬಾ ಸಹಾಯವಾಗಲಿವೆ. ಇನ್ನು ಸಾವಿರಾರು ಗೇಣಿದಾರರ ವಿವಾದ ಹೈಕೋರ್ಟಿನಲ್ಲಿದ್ದು ಇಂದಿಗೂ ಅವರು ಕೋರ್ಟಿಗೆ ಅಲೆದಾಡುವ ಪರಿಸ್ಥಿತಿಯಲ್ಲಿ ಇದ್ದಾರೆ. ಇದನ್ನು ಕೂಡಲೇ ಇತ್ಯರ್ಥಗೊಳಿಸಿ ದುಡಿಯುವ ರೈತರಿಗೆ ಭೂಮಿ ಸಿಗುವ ಹಾಗೆ ಮಾಡಬೇಕೆಂದು ದ. ಕ. ಜಿಲ್ಲಾ ರೈತ ಸಂಘ ಒತ್ತಾಯಿಸುತ್ತಿದೆ.

ಬಾಗೇಪಲ್ಲಿಯಲ್ಲಿ ರೈತ ಸಂಘದ ಸಮಾವೇಶ

ತಾ|| 2-10-84 ರಂದು ಬಾಗೇಪಲ್ಲಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಬಾಗೇಪಲ್ಲಿ ತಾಲ್ಲೂಕ್ ಮಟ್ಟದ ಸಮಾವೇಶ ಕಾ|| ಎ. ವಿ. ಅಪ್ಪಸ್ವಾಮಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ತಾಲ್ಲೂಕಿನ ಐದು ಹೋಬಳಿಗಳಿಂದ 130 ಜನ ಪ್ರತಿನಿಧಿಗಳು ಬಂದಿದ್ದು ಕಾ|| ಬಿ. ಕೃಷ್ಣಮೂರ್ತಿಯವರು ಸ್ವಾಗತವನ್ನು ಕೋರಿದರು.

ಈ ಸಮಾವೇಶವನ್ನು ಉದ್ದೇಶಿಸಿ ಕಾ|| ಜಿ. ವಿ. ಶ್ರೀರಾಮ ರೆಡ್ಡಿ ಮಾತನಾಡಿ ರೈತ ಸಂಘದ ಕಾರ್ಯಕ್ರಮವನ್ನು ವಿವರಿಸಿದರಲ್ಲದೆ ಭೂ ಮಾಲಿಕ ಮತ್ತು ಬಂಡವಾಳಶಾಹಿ ವರ್ಗವು ರೈತರಲ್ಲಿ ಒಡಕು ಉಂಟು ಮಾಡುತ್ತಿರುವುದರ ವಿರುದ್ಧ ರೈತರು ಎಚ್ಚರಿಕೆಯಿಂದ ಇರಬೇಕೆಂದು ಕರೆಕೊಟ್ಟರು.

ಕಾ|| ಎ. ವಿ. ಅಪ್ಪಸ್ವಾಮಿರೆಡ್ಡಿಯವರು ಕೋಲಾರ ಜಿಲ್ಲೆಯ ರೈತರ ಹೋರಾಟದ ಪರಂಪರೆಯನ್ನು ವಿವರಿಸಿ ರೈತರು ತಮ್ಮ ಸಮಸ್ಯೆಗಳ ಬಗ್ಗೆ ಒಗ್ಗಟ್ಟಿನಿಂದ ಹೋರಾಡಬೇಕೆಂದು ಕರೆಕೊಟ್ಟರು.

ಕಡೆಯಲ್ಲಿ 20 ಜನರ ಒಂದು ತಾಲ್ಲೂಕ್ ಅಡಹಾಕ್ ಸಮಿತಿಯನ್ನು ರಚಿಸಿ ಕಾ|| ಸಿ. ಡಿ. ಗಂಗುಲಪ್ಪ ಮತ್ತು ಕಾ|| ವೆಂಕಟ ನಾರಾಯಣಪ್ಪ ಅವರನ್ನು ತಾಲ್ಲೂಕ್ ಸಂಚಾಲಕರನ್ನಾಗಿ ಆರಿಸಲಾಯಿತು.

ರೈತರಿಗೆ ಕೂಡಲೇ ಪರಿಹಾರ ಸಿಗಲಿ

ಈ ವರ್ಷದ ಭೀಕರ ಬರಗಾಲದಲ್ಲಿ ಪರಿಹಾರ ಕಾರ್ಯಗಳು ತೀರಾ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಾ ಇದೆ. ಇನ್ನೂ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಕಾಮಗಾರಿಗಳು ನಡೆಯಬೇಕು. ಆಹಾರ ಧಾನ್ಯ ಕೂಲಿಗಾರರಿಗೆ ತಲುಪುತ್ತಿಲ್ಲ. ಪರೋಕ್ಷವಾಗಿ ಕಂಟ್ರಾಕ್ಟ ಪದ್ಧತಿಯೇ ಮುಂದುವರಿಯುತ್ತಿದೆ. ಶಾಶ್ವತ ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದು ಅತಿಮುಖ್ಯವಾದಂತಾಗಿದೆ. ಇದರ ಕುರಿತು ತುಮಕೂರು ಜಿಲ್ಲಾ ರೈತ ಸಂಘದ ಪರವಾಗಿ ಸಲ್ಲಿಸಿದ ಮನವಿಯ ಮುಖ್ಯಾಂಶಗಳೇನೆಂದರೆ :-

ಹೇಮಾವತಿ, ಯಗಜಿ, ಮೇಲಣ ಭದ್ರ ನಾಲೆಗಳನ್ನು ಈ ಜಿಲ್ಲೆಗೆ ತಿರುಗಿಸುವುದಲ್ಲದೆ ಅರಬ್ಬೀ ಸಮುದ್ರಕ್ಕೆ ಹೋಗುತ್ತಿರುವ ಪಶ್ಚಿಮ ನದಿಗಳನ್ನು ಈ ಕಾಲುವೆಯ ಮೂಲಕ ಇನ್ನೂ ವಿಸ್ತಾರ ಪ್ರದೇಶಕ್ಕೆ ಒದಗಿಸಿಕೊಡಬೇಕಲ್ಲದ ಈ ನಾಲೆಗಳ ನೀರು ಸೋರಿ

ರೈತ ರಂಗ

ಹೋಗದಂತೆ ವೇಗವಾಗಿ ನೀರು ಹರಿಯುವಂತೆ ಈ ನಾಲೆಗಳ ಕಾಂಕ್ರೀಟ್ ಲೈನಿಂಗ್‌ನ ಮೂಲಕ ನಿರ್ಮಿಸಬೇಕು.

ಪ್ರತಿ ನೂರು ಜನಸಂಖ್ಯೆಗೆ ಒಂದು ಬಾವಿಯಲ್ಲಿ ಪ್ರತಿಹಳ್ಳಿಯಲ್ಲಿ ಯಾವಾಗಲೂ ಕೆಲಸ ನಡೆಯುವಂತೆ ಧನ ಸಹಾಯ ಮಾಡಬೇಕು. ತೀರಾ ಬಡವರಿಗೆ ಬೋರ್‌ವೆಲ್ ಪಂಪ್ ಸೌಲಭ್ಯವನ್ನು ಒದಗಿಸಿಕೊಡಬೇಕು.

ಸಾಮೂಹಿಕ ಜೀವವಿಮೆ, ಬೆಳೆ ಮತ್ತು ರಾಸು ವಿಮೆ ಕಡ್ಡಾಯಗೊಳಿಸಬೇಕು.

ತೀರಾ ಬಡವರಿಗೆ ಬಡ್ಡಿ ಇಲ್ಲದ ಸಾಲಗಳನ್ನು ಮಧ್ಯಮ ವರ್ಗದವರಿಗೆ ಶೇ 3ಕ್ಕಿಂತ ಹೆಚ್ಚಾಗದಂತೆ ಸಾಲವನ್ನು ಮಂಜೂರುಮಾಡಿ ಈಗಾಗಲೇ ಇರುವ ಸಾಲವನ್ನು ರದ್ದುಪಡಿಸಬೇಕು.

ದಿನಗೂಲಿ 12 ರೂಪಾಯಿ ನಿಗದಿಪಡಿಸಬೇಕು.

ಗ್ರಾಮಾಂತರ ಸೊಸೈಟಿ ಅಥವಾ ಡಿಪೋಗಳಲ್ಲಿ ಜಾಸ್ತಿ ಬೆಲೆಗೆ ಧಾನ್ಯ ಮಾರಾಟವಾಗುತ್ತಿರುವುದನ್ನು ತಪ್ಪಿಸಲು ಸರ್ವಪಕ್ಷಗಳ ಉಸ್ತುವಾರಿ ಸಮಿತಿ ನೇಮಿಸಬೇಕು.

60 ವರ್ಷಕ್ಕೂ ಮೇಲ್ಪಟ್ಟ ಕೃಷಿ ಕಾರ್ಮಿಕರಿಗೆ ತಿಂಗಳಿಗೆ ನೂರುರೂಪಾಯಿ ಮಾಶಾಸನ ಮಂಜೂರು ಮಾಡಬೇಕು.

ಮನೆ ಇಲ್ಲದವರಿಗೆ ಮನೆ ಕಟ್ಟಲು ನಿವೇಶನ ಕೊಟ್ಟು, ಮನೆಕಟ್ಟಲು ಹಣ ಸಹಾಯ ಮಾಡಬೇಕು.

ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಉಳುಮೆ ಮಾಡಿರುವ ರೈತರಿಗೆ ಸದರಿ ಜಮೀನುಗಳನ್ನು ಖಾಯಂಮಾಡಿ ಹಕ್ಕುಪತ್ರ ಕೊಡಬೇಕು. ಈ ಬಗ್ಗೆ ಸುಮಾರು 600 ಕ್ಕೂ ಹೆಚ್ಚು ಅರ್ಜಿಗಳನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸುತ್ತಿದ್ದೇವೆ.

ತುಂಡುಭೂಮಿ ಪುನಹ ರಿಜಿಸ್ಟರ್ ಆಗುವಂತೆ ಕಾನೂನು ಆಗಬೇಕು.

ಭೂನ್ಯಾಯಮಂಡಲಿ ಭೂ ವಿತರಣಾ ಸಮಿತಿ ಬರಗಾಲ ಪರಿಹಾರ ಸಮಿತಿ ಮುಂತಾದ ಸರ್ಕಾರ ರಚಿಸುವ ಸಮಿತಿಗಳಲ್ಲಿ ರೈತ ಸಂಘಕ್ಕೆ ಪ್ರಾತಿನಿಧ್ಯ ಕೊಡಲೇಬೇಕು.

ನಗರ ಪಕ್ಕ ಕೃಷಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುವಾಗಿ ಆ ರೈತರಿಗೆ ಪಕ್ಕದ ಸೈಟುಗಳ ಬೆಲೆಗೆ ಸಮಾನವಾದಷ್ಟು ಪರಿಹಾರ ಹಣ ಕೊಡಬೇಕು.

ಕೃಷಿ ಉತ್ಪನ್ನಗಳಿಗೆ ಔದ್ಯೋಗಿಕ ಉತ್ಪನ್ನಗಳ 10 ವರ್ಷದ ಸರಾಸರಿ ಬೆಲೆ ಆದಾರದ ಮೇಲೆ ಬೆಲೆ ನಿಗದಿಪಡಿಸಬೇಕು.

ಮಾರುಕಟ್ಟೆ ಸುಂಕದ ಪೂರಾ ಹಣವನ್ನು ಗ್ರಾಮಾಂತರ ರಸ್ತೆಗಳ ದುರಸ್ತಿಗೆ ಉಪಯೋಗಿಸಬೇಕು.

ಗೇಣಿದಾರರಾಗಿದ್ದು ಅನಿವಾರ್ಯ ಕಾರಣಗಳಿಂದ ಅರ್ಜಿ ಹಾಕಿಕೊಳ್ಳಲು ಸಾಧ್ಯವಾಗದಿದ್ದವರಿಗೆ ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡಬೇಕು.

ಬೋರ್‌ವೆಲ್ ಕೆಟ್ಟ ತಕ್ಷಣವೇ ರಿಪೇರಿಯಾಗುವಂತೆ ವ್ಯವಸ್ಥೆಯಾಗಬೇಕು.

ದನಗಳ ಮೇವಿಗೆ ಹೋಬಳಿಗೆ ಒಂದರಂತೆ ಹುಲ್ಲುಮಾರಾಟ ಕೇಂದ್ರ ಸ್ಥಾಪಿಸಬೇಕು. ಸುಬಾಬುಲ್ ಪ್ಲಾಂಟೇಷನ್ ಬೆಳೆದ ರೀತಿ ಗೋಣಿ ಮರ ಮತ್ತು ಸೀಬೇವಿನ ಮರಗಳ ತೋಪುಗಳನ್ನು ವಿಪುಲವಾಗಿ ನೀಲಗಿರಿ ಗಿಡಗಳ ಬದಲು ಬೆಳೆಸಬೇಕು. ನೇಪಿಯರ್ ತರಹದ ಹುಲ್ಲುಗಳನ್ನು ಬೆಳೆಯಲು ಪ್ರೋತ್ಸಾಹಿಸಬೇಕು.

ಸರ್ಕಾರಿ ಭೂಮಿಗಳನ್ನು ಗುಂಡುತೋಪು. ಗೋಮಾಳಗಳನ್ನು ಅತಿಕ್ರಮಿಸಿರುವ ಜಮೀನ್ದಾರರು ತಮ್ಮನ್ನು ಸದರಿ ಜಮೀನುಗಳಿಂದ ಬಿಡಿಸಿದಂತೆ ನ್ಯಾಯಾಲಯಗಳಿಂದ ತಂದಿರುವ ತಡೆಯಾಜ್ಞೆಗಳನ್ನು ರದ್ದು ಪಡಿಸುವ ಕ್ರಮ ಕೈಗೊಂಡು ಸದರಿ ಜಮೀನುಗಳನ್ನು ಮನೆ ನಿವೇಶನಗಳಿಗೂ ಬಡರೈತರ ವ್ಯವಸಾಯಕ್ಕೂ ಹಂಚಬೇಕು.

ಈ ಮೇಲಿನ ಬೇಡಿಕೆಗಳನ್ನು ಈಡೇರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ರೈತಸಂಘದ ಮುಖಂಡರಾದ ಗೋವಿಂದರಾಜು, ಹೆಚ್. ಸಿ. ಚೆನ್ನಪ್ಪ ಆರ್. ರವೀಂದ್ರ ನಾಯಕ್, ಎಂ. ಎನ್. ಚಲುವರಾಜು, ವಿ. ರಂಗಪ್ಪನವರು ಮನವಿಯನ್ನರ್ಪಿಸಿ ಚರ್ಚೆ ಮಾಡಿದರು.

ಯೋಜನಾಧಿಕಾರಿಗಳಿಗೆ ಘೇರಾವೊ

ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಘಟಕ ಆಳಂದ ಗುಲಬರ್ಗಾ ವತಿಯಿಂದ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 6 ಹಳ್ಳಿಗಳ 400 ಜನ ರೈತರು ಮತ್ತು ಕೂಲಿಕಾರರು ಯೋಜನಾಧಿಕಾರಿಗಳಿಗೆ ಘೇರಾವೋ ಮಾಡಿದರು. ದಿನಾಂಕ 16-10-84ರಂದು ಅಂಬಲಗಾಕ್ಕೆ ಭೆಟಿಯಿತ್ತಾಗ ಈ ಘೇರಾವೊ ನಡೆಯಿತು. ಯೋಜನಾಧಿಕಾರಿಗಳು ಒಂದು ವಾರದೊಳಗಾಗಿ ಉದ್ದೇಶಿತ ಅಂಬಲಗಾ ಪ್ರೊಕ್ಯೊಲೇಶನ್ ಕೆರೆಕೆಲಸ ಮತ್ತು ಉಳಿದ ಹಳ್ಳಿಗಳಲ್ಲಿ ಬೇರೆ ಕೆಲಸಗಳನ್ನು ಕೈಗೆತ್ತಿಕೊಂಡು ರೈತ ಮತ್ತು ಕೂಲಿಕಾರರಿಗೆ ಕೆಲಸ ಒದಗಿಸುವುದಾಗಿ ಭರವಸೆ ಇತ್ತ ಮೇಲೆ ರೈತರು ಘೇರಾವೊ ಹಿಂತೆಗೆದುಕೊಂಡರು. ತಾಲೂಕು ರೈತಸಂಘದ ಪದಾಧಿಕಾರಿಗಳಾದ ಶ್ರೀ ಕಲ್ಲಪ್ಪ ಚೀಲಿ, ಮೇಘರಾಜ ಕಠಾರೆ, ಬಸವರಾಜ ಜವಳಿ, ಸಿದ್ರಾಮಪ್ಪ ಚಂಚೋಳಿ, ಬಾಲಯ್ಯ ಗುತ್ತೇದಾರ ಇವರ ಮುಖಂಡತ್ವದಲ್ಲಿ ಘೇರಾವೊ ನಡೆಯಿತು.

○

ಟೂರಿಸ್ಟ್ ಕಾರು ಚಾಲಕನ ಮೇಲೆ ಹಲ್ಲೆಯ ಖಂಡನೆ

ಮೋಟರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ [ಸಿ.ಐ.ಟಿ.ಯು.] ಗೆ ಸಂಯೋಜಿತವಾಗಿರುವ ಬಂಟ್ವಾಳ ಟೂರಿಸ್ಟ್ ಟ್ಯಾಕ್ಸಿ ಚಾಲಕರ ಸಮನ್ವಯ ಸಮಿತಿಯ ಸದಸ್ಯರೂ, ಯೂನಿಯನಿನ ಸಕ್ರೀಯ ಕಾರ್ಯಕರ್ತರೂ, ಆದ ಶ್ರೀ ಲಿಗೋರಿ ಕ್ರಾಸ್ಟಾ ಎಂಬವರ ಕಾರನ್ನು ತಾ|| 9-10-84 ರಂದು ಬಾಡಿಗೆಗೆ ಗೊತ್ತು ಮಾಡಿ ಹೆಬ್ರಿಯ ಬಳಿ ಅವರನ್ನು ಕಾರಿನಿಂದ ಹೊರಗೆಸೆದು ಅವರ ಮೇಲೆ ಮರಣಾಂತಿಕವಾಗಿ ಹಲ್ಲೆ ನಡೆಸಿ, ಕಾರನ್ನು ಅಪಹರಿಸಿರುವ ಘಟನೆಯನ್ನು ಯೂನಿಯನಿನ ಕಾರ್ಯಕಾರೀ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ತೀವ್ರವಾಗಿ ಹಲ್ಲೆಗೊಳಗಾದ ಶ್ರೀ ಕ್ರಾಸ್ಟಾ ಅವರು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ.

ಹೆಬ್ರಿಯ ಘಟನೆಯಿಂದಾಗಿ ತನ್ನ ಜೀವನ ನಿರ್ವಹಣೆಯ ಸಾಧನವಾದ ಕಾರನ್ನೇ ಕಳೆದುಕೊಂಡು ಹಾಗೂ ಹಲ್ಲೆಗೊಳಗಾಗಿ, ಮುಂದಕ್ಕೂ ದುಡಿಯಲ ಸಾಧ್ಯವಾದ ಸ್ಥಿತಿಯಲ್ಲಿರುವ ಶ್ರೀ ಲಿಗೋರಿ ಕ್ರಾಸ್ಟಾ ಅವರಿಗೆ ಸೂಕ್ತ ಪರಿಹಾರವನ್ನು ನೀಡುವಂತೆ ಯೂನಿಯನ್ ಸರಕಾರವನ್ನು ಒತ್ತಾಯಿಸುತ್ತದೆ. ಕಾರು ಅಪಹರಣಕಾರರನ್ನು ಪತ್ತೆಹಚ್ಚಿ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪೋಲೀಸ್ ಅಧಿಕಾರಿಗಳನ್ನು ಯೂನಿಯನ್ ಒತ್ತಾಯಿಸುತ್ತದೆ.

೨೯ ನೆಯ ಕರ್ನಾಟಕ ರಾಜ್ಯೋತ್ಸವ - ನಮ್ಮ ಮುಂದಿರುವ ಕರ್ತವ್ಯಗಳು

(1ನೇ ಪುಟದಿಂದ)

ಕ್ಕೆ ಏರಿಸಿದ್ದು, ಇತ್ತೀಚೆಗೆ ಮಾಡಿದ ಭೂ ಸುಧಾರಣೆಯಲ್ಲಿ ಜಮೀನು ಪಡೆದ ಗೇಣಿದಾರರಿಗೆ ಶುಲ್ಕ ನೀಡಿಕೆಯಿಂದ ವಿನಾಯಿತಿ ಮತ್ತು ಒಡೆತನ ನೀಡಿಕೆ ನಿರ್ಧಾರ ಅತ್ಯಂತ ಮಹತ್ವವಾದದ್ದು.

ಇವುಗಳನ್ನು ನಾವು ಗುರುತಿಸುವಾಗಲೇ ಜನತಾ ಸರಕಾರ ಬಂಡವಾಳಶಾಹಿ-ಭೂ ಮಾಲಕ ವರ್ಗದ ಪಕ್ಷಗಳ ಸರಕಾರವೆಂಬುದನ್ನು ಮರೆಯುವಂತಿಲ್ಲ. ಆ ಕಾರಣದಿಂದಲೇ ಕೇಂದ್ರ-ರಾಜ್ಯಗಳ ಇಂದಿನ ಸಂಬಂಧದಿಂದ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆಂದು ಗೊತ್ತಿದ್ದು ಕೇಂದ್ರ ಸರಕಾರದ ಈ ನೀತಿಯ ವಿರುದ್ಧ ಜನಾಭಿಪ್ರಾಯ ಮೂಡಿಸುವ ಕರ್ತವ್ಯದಲ್ಲಿ ಜನತಾ ಸರಕಾರವಾಗಲೀ, ಪಕ್ಷವಾಗಲೀ ತೊಡಕಿಲ್ಲ. ಜಿಲ್ಲಾ ಪರಿಷತ್-ಶಿಕ್ಷಣ ಮಸೂದೆಗಳಿಗೆ ಮಂಜೂರಿ ನೀಡಲು ರಾಷ್ಟ್ರಾಧ್ಯಕ್ಷರ ವಿಲಂಬ ನೀತಿಯ ವಿರುದ್ಧವೂ ಜನಾಭಿಪ್ರಾಯ ಮೂಡಿಸುವ ಪ್ರಯತ್ನ ನಡೆದಿಲ್ಲ. ವಿಜಯನಗರ ಉಕ್ಕಿನಕಾರ್ಖಾನೆ ವಿದ್ಯುತ್ ಸ್ಥಾವರ, ರೈಲು ಮಾರ್ಗ ಮತ್ತಿನ್ನಿತರ ಅಭಿವೃದ್ಧಿ ಕಾರ್ಯಗಳು ಮೂಲೆ ಗುಂಪಾಗಲಿಕ್ಕೂ ಇಂಥ ನೀತಿಯೇ ಕಾರಣವೆಂದರೆ ತಪ್ಪೇನಲ್ಲ.

ಒತ್ತುವರಿ ಭೂಮಿಯನ್ನು ಬಡ ರೈತರಿಗೆ ಹಂಚುವುದಾಗಿ ಹೇಳಿ ವರ್ಷ ಸಂದಿಹೋದರೂ ಈ ಬಗ್ಗೆ ಯಾವ ಕ್ರಮ ಕೈಗೊಂಡಿಲ್ಲ.

ಭೂ ಸುಧಾರಣೆಗಳನ್ನು ಬಿಗಿ ಮಾಡುವುದಕ್ಕೆ, ಭೂ ಮಿತಿಯನ್ನು ತಪ್ಪಿಸಿಕೊಂಡು ಅಡಗಿರುವ ಹೆಚ್ಚುವರಿ ಭೂಮಿಯನ್ನು ಹೊರಗೆ ತರಲು ತಿದ್ದುಪಡಿಗಳ ಮಾತಿರಲಿ, ಇರುವ ಹೆಚ್ಚುವರಿ ಭೂಮಿಯನ್ನು ತೀವ್ರವಾಗಿ ಹಂಚುವ ಕ್ರಮ, ಭೂ ನ್ಯಾಯ ಮಂಡಳಿಗೆ ರೈತರ ಸಂಘಟನೆಗಳ ಪ್ರತಿನಿಧಿಗಳನ್ನು ಅದರಲ್ಲಿಯೂ ಬಡ ರೈತರನ್ನು ಪ್ರತಿನಿಧಿಸುವ ಕರ್ನಾಟಕ ಪ್ರಾಂತ ರೈತ ಸಂಘದ ಪ್ರತಿನಿಧಿಗಳನ್ನು ನೇಮಕಮಾಡಿ ಗೇಣಿದಾರರ ಹಿತರಕ್ಷಣೆ ಭೂ ಸುಧಾರಣೆ ಕಾನೂನಿನ ಸರಿಯಾದ ಜಾರಿಗೆ ಕೂಡ ಪ್ರಯತ್ನ ಪಡದೆ ಹಿಂದಿನ ಜಾಡಿನಲ್ಲಿಯೇ ಸಾಗಿದೆ. ಅವರ ಮನೆ ನಿವೇಶನ ಮತ್ತು ವಸತಿಯ ಸಮಸ್ಯೆಯೂ ಅಷ್ಟೇ.

ಕನಿಷ್ಠ ಕೂಲಿ ಸಲಹಾ ಸಮಿತಿ ಕೃಷಿ ಕೂಲಿಕಾರರಿಗೆ ಹತ್ತು ರೂಪಾಯಿಗಳನ್ನು ಕನಿಷ್ಠ ಕೂಲಿಯಾಗಿ ನಿಗದಿಪಡಿಸಬೇಕೆಂದು ತೀರ್ಮಾನಿಸಿದರೂ ಜಾರಿಗೆ ತರಲಿಲ್ಲ. ಇದರಿಂದ ಲಕ್ಷಾಂತರ ಕೃಷಿ ಕೂಲಿಕಾರರ ಜೀವನ ಮಟ್ಟ ಕುಸಿದಿದೆ.

ಕೃಷಿ ಸಾಲ, ಬೆಲೆ ನೀತಿಯೂ ಅಷ್ಟೆ. ಹಿಂದಿನ ವರ್ಷ ಬಡ್ಡಿ ಮನ್ನಾ ಮಾಡಿದ್ದನ್ನು ಸ್ವಾಗತಿಸಿದ್ದೇವೆ. ಆದರೆ ಈ ವರ್ಷ ಅದನ್ನು ಮಾಡಲು ನಾಬಾರ್ಡ್ ಒಪ್ಪಲಿಲ್ಲವೆಂದು ಹೇಳಲಾಯಿತು ಆದರೆ ಅದನ್ನು ಒಪ್ಪಿಸುವುದಕ್ಕೆ ಯಾವ ಒತ್ತಡವನ್ನೂ ತರಲಿಲ್ಲ ಬೆಲೆಗಾಗಿ ಒಂದು ಸಲಹಾ ಸಮಿತಿಯನ್ನು ರಚಿಸಿದರೂ ಲಾಭದಾಯಕ ಬೆಲೆಗಾಗಿ ನಿರಂತರ ಹೋರಾಟ ಮಾಡಿದ ಪ್ರಾಂತ ರೈತ ಸಂಘವನ್ನೇ ಹೊರತುಪಡಿಸಿ ರಚಿಸಿದ ಸಮಿತಿಯ ವರದಿ ಬೆಳೆಗಳ ಕುಯಿಲಿನ ಕಾಲ ಬಂದರೂ ಪ್ರಕಟವಾಗಲಿಲ್ಲ. ಇನ್ನು ಇವರು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವುದು ಎಂದು? ಕೇಂದ್ರ ಸರಕಾರದವರು ಇದನ್ನು ಪರಿಗಣಿಸುವುದು ಎಂದು? ಇಂತಹ ಕಣ್ಣೊರೆಸುವ ಕ್ರಮಗಳನ್ನು ಬಿಟ್ಟು ತನ್ನ ಮಿತಿಯಲ್ಲಿ ಸಾಧ್ಯವಾದಷ್ಟು ತನ್ನ ಹಿಡಿತದಲ್ಲಿರುವ ಸಂಸ್ಥೆಗಳ ಮೂಲಕ ಮಾರುಕಟ್ಟೆ ಪ್ರವೇಶಿಸಿ ಬೆಂಬಲ ಬೆಲೆಯನ್ನು ಘೋಷಿಸುವ, ಅದನ್ನು ನೀಡುವ ಭರವಸೆಯನ್ನು ಕೂಡ ಮಾಡಿಲ್ಲ. ರೈತರಿಗೆ ಕೆಲವು ಸಣ್ಣ ಪುಟ್ಟ ರಿಯಾಯಿತಿಗಳು ದೊರಕಿದರೂ ರೈತರ, ಕೃಷಿ ಕಾರ್ಮಿಕರ ಕಷ್ಟವನ್ನು ಪರಿಹರಿಸುವ ಕ್ರಮಗಳನ್ನು ಯೋಜಿಸಲಿಲ್ಲ.

ಇದೇ ರೀತಿ ಸರಕಾರದ ಕಾರ್ಮಿಕ ರಂಗದಲ್ಲಿಯೂ ಕಾರ್ಮಿಕರಿಗೆ ಅನುಕೂಲಕರ ನಿಲುವು ಕಂಡು ಬರುತ್ತಿಲ್ಲ. ಕನಿಷ್ಟ ಕೂಲಿ ನಿರ್ಧಾರ ರವಂತೂ ಮೂರು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಅಸಂಘಟಿತ ಕಾರ್ಮಿಕರಿಗೆ ದಿನನಿತ್ಯ ಅನ್ಯಾಯವಾಗುತ್ತಿದೆ. ಸಂಘಟಿತ ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರ ಹಸ್ತಕ್ಷೇಪ, ಗೂಂಡಾಗಿರಿಯ ಹಾವಳಿ ಕಡಿಮೆಯಾದರೂ ಸರಕಾರದ ಧೋರಣೆ ಅದೇ ರೀತಿ ಮುಂದುವರೆದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಖಾಸಗೀಕರಣ ಮುಂದುವರೆದಿದೆ. ಪ್ರೌಢಶಾಲೆಗಳು, ತಾಂತ್ರಿಕ ಶಾಲೆಗಳು, ಕಾಲೇಜುಗಳು ಇವುಗಳಲ್ಲಿ ಹೆಚ್ಚು ಪಾಲು ಖಾಸಗೀ ಕ್ಷೇತ್ರಕ್ಕೆ ಹೋಗುತ್ತಿದೆ. ಕ್ಯಾಪಿಟೇಷನ್ ಸುಲಿಗೆ ನಿರಂತರವಾಗಿ ಮುಂದುವರೆಯುತ್ತಿದೆ.

ಈ ಎಲ್ಲಾ ಅಂಶಗಳ ಬಗ್ಗೆ ಜನತಾ ಪಕ್ಷದ ಸಫಲತೆ ವಿಫಲತೆಗಳ ಬಗ್ಗೆ ನಾವು ಜನರ ಬಳಿ ಹೋಗಿ ವಿವರಿಸಿ ಹೇಳಬೇಕು ಅವರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಬೇಕು. ಜನತಾ ಸರಕಾರ ತೆಗೆದುಕೊಳ್ಳಲು ಹಿಂದೆ ಮುಂದೆ ನೋಡುವ ಪ್ರಗತಿಪರ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮಾಡಲು ಜನರನ್ನು ಸಂಘಟಿಸಿ ಒತ್ತಾಯ ತರಬೇಕು. ಬೇರೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳನ್ನು ಜೊತೆಗೂಡಿಸಿಕೊಂಡು ಕೇಂದ್ರ ರಾಜ್ಯ ಸಂಬಂಧಗಳ ಬಗ್ಗೆ, ನಮ್ಮ ರಾಜ್ಯದ ಪ್ರಜಾಸತ್ತಾತ್ಮಕ ಬೇಡಿಕೆಗಳ ಬಗ್ಗೆ, ನಮ್ಮ ವಿಧೇಯಕಗಳು ರಾಷ್ಟ್ರಪತಿಗಳಿಂದ ಒಪ್ಪಿಗೆ ಸಿಗದ ಬಗ್ಗೆ ಚಳುವಳಿ ರೂಪಿಸಬೇಕು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ನಮ್ಮೊಡನೆ ಸೇರಬೇಕಾದರೆ ನಮ್ಮ ಸ್ವಂತ ಶಕ್ತಿಯನ್ನು ಬೆಳೆಸಿಕೊಂಡಲ್ಲದೆ, ರಾಜ್ಯವ್ಯಾಪಿಯಾಗಿ ಬಲವಾದ ಪಕ್ಷವಾಗಿ, ಮೂಡಿ ಬಂದಲ್ಲದೆ ಸಾಧ್ಯವಿಲ್ಲ ಎಂಬುದನ್ನು ನಾವು ಮರೆಯುವಂತಿಲ್ಲ.

ಈ ದಿಶೆಯಲ್ಲಿ ನಮ್ಮ ಪಕ್ಷ ಒಂದು ವರ್ಷದಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂಬುದನ್ನು ಗಮನಿಸಬೇಕು.

ಪಕ್ಷಾಂತರದ ವಿರುದ್ಧ, ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಸೂಚಿಸಲು ರಾಜ್ಯದ ಅನೇಕ ಕಡೆಗಳಲ್ಲಿ ಮೆರವಣಿಗೆ-ಧರಣಿ ಮುಷ್ಕರ ಮತ್ತು ಬಂಧನ ಕಾರ್ಯಕ್ರಮವನ್ನು ಪಕ್ಷ ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ಕೈಗೊಂಡವು. ಸಿ. ಐ. ಟಿ. ಯು ತನ್ನ ಅನೇಕ ಬೇಡಿಕೆಗಳಿಗಾಗಿ ಕಾರ್ಮಿಕ ಪರ ಧೋರಣೆಗಳನ್ನು ತಳೆಯುವಂತೆ ಒತ್ತಾಯಿಸಲು ರಾಜ್ಯಾದ್ಯಂತ ಅನೇಕ ಕಡೆಗಳಲ್ಲಿ ಮುಷ್ಕರ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಕಾರ್ಖಾನೆಗಳ ಮುಚ್ಚುವಿಕೆ, ಬೀಗಮುದ್ರೆ ಇತ್ಯಾದಿಗಳ ವಿರುದ್ಧ ರಾಷ್ಟ್ರೀಯ ಚಳುವಳಿ ಸಮಿತಿಯ ನೇತೃತ್ವದಲ್ಲಿ ಸಮಾವೇಶ ನಡೆಸಲಾಯಿತು. ಸಿ. ಐ. ಟಿ. ಯು. ಸಮ್ಮೇಳನದ ಅಂತ್ಯದಲ್ಲಿ ಮಂಗಳೂರಿನಲ್ಲಿ ನಡೆದ ಬೃಹತ್ ಮೆರವಣಿಗೆ, ಬಹಿರಂಗ ಸಭೆಯಲ್ಲಿ ಕಾರ್ಮಿಕ ಪರ ಧೋರಣೆಗಳಿಗಾಗಿಅಸಂಘಟಿತ ಕಾರ್ಮಿಕರ ಕನಿಷ್ಠ ಕೂಲಿಗಾಗಿ, ರೈತರಿಗೆ ಒತ್ತುವರಿಯಾದ ಸರಕಾರಿ ಅರಣ್ಯ ಜಮೀನಿನ ಒಡೆತನದ ಹಕ್ಕು ನೀಡುವಂತೆ ಒತ್ತಾಯಿಸುವ ಚಳುವಳಿ ಕೈಗೊಳ್ಳಲು ತೀರ್ಮಾನಿಸಲಾಯಿತು.

ಪ್ರಾಂತ ರೈತ ಸಂಘ ರಾಜ್ಯ ವ್ಯಾಪಿಯಾಗಿ ನಡೆಸಿದ ಪಿಕೆಟಿಂಗ್ ಮತ್ತು ಬಂಧನ ಕಾರ್ಯಕ್ರಮದಲ್ಲಿ 25000 ಜನಕ್ಕೂ ಹೆಚ್ಚು ಬಂಧನಕ್ಕೊಳಗಾದರು ಮಹಿಳೆಯರು, ಕೃಷಿ ಕಾರ್ಮಿಕರು, ಬಹು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇದಕ್ಕೆ ಬೆಂಬಲವಾಗಿ ಸಂಘಟಿತ ಕಾರ್ಮಿಕರೂ ಮುಷ್ಕರ ಆಚರಿಸಿ ಬಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿದುದು ಒಂದು ವಿಶೇಷ.

ಪಂಜಾಬಿನಲ್ಲಿ ಭಯೋತ್ಪಾದಕರ ಚಟುವಟಿಕೆ ತೀವ್ರವಾಗಿ ಸೇನೆ ಪ್ರವೇಶ ಮಾಡಿದ್ದರ ಬಗ್ಗೆ ಕೇಂದ್ರ ಸಮಿತಿಯ ನಿರ್ದೇಶನದಂತೆ ಪಂಜಾಬ್ ವಾರಾಚರಣೆಯನ್ನು ಅನೇಕ ಕಡೆ ಯಶಸ್ವಿಯಾಗಿ ಆಚರಿಸಲಾಯಿತು. ಜನರಿಗೆ, ಸ್ವತಃ ಸಿಖ್ಖರಿಗೆ ಈ ಘಟನೆಗಳ ಹಿನ್ನೆಲೆಯನ್ನು ವಿವರಿಸುವುದರಲ್ಲಿ ಸಹಾಯಕವಾಯಿತು.

ಆಂಧ್ರದ ತೆಲುಗು ದೇಶಂ ಸರಕಾರ ವಜಾ ಆದ ಸುದ್ದಿ ಕೇಳಿದ ಕೂಡಲೇ ಪಕ್ಷದ ಅನೇಕ ಘಟಕಗಳು ಮುಂದೆ ನುಗ್ಗಿ ಇತರ ಪಕ್ಷಗಳನ್ನು ಜೊತೆಗೆ ಎಳೆದುಕೊಂಡು, ನಾಯಕತ್ವ ನೀಡಿ, ಮೆರವಣಿಗೆ ಬಂದ್‌ಗಳನ್ನು ರಾಜ್ಯವ್ಯಾಪಿಯಾಗಿ ಆಚರಿಸಿದುವು. ಬೆಂಗಳೂರಿನಲ್ಲಿ ಪ್ರತಿಭಟನಾ ಸಭೆಯನ್ನು ಸಂಘಟಿಸುವುದರಲ್ಲಿ, ಮೊತ್ತ ಮೊದಲ ಬಾರಿಗೆ ರಾಜಕೀಯ ಮುಷ್ಕರವನ್ನು ಬೆಂಗಳೂರಿನಲ್ಲಿ ಆಚರಿಸಿ ಯಶಸ್ವಿ ಮಾಡುವುದರಲ್ಲಿ ಬೆಂಗಳೂರು ಜಿಲ್ಲಾ ಘಟಕದ ಮುಂದಾಳುತ್ವ ಗಮನಾರ್ಹ.

ಅದೇ ರೀತಿಯಲ್ಲಿ ರಾಷ್ಟ್ರದ ಪರಿಸ್ಥಿತಿಯನ್ನು ಜನರಿಗೆ ವಿವರಿಸಲು ರಾಜ್ಯದ ಅನೇಕ ಕಡೆಗಳಲ್ಲಿ ರಾಜ್ಯ ಸಮಿತಿಯ ತೀರ್ಮಾನದ ಮೇರೆಗೆ ಸಂಘಟಿಸಿದ ರಾಜಕೀಯ ಚಳುವಳಿ ರಾಜ್ಯದ ಜನರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿತು.

ಕನ್ನಡ ರಾಜ್ಯೋತ್ಸವದ ಈ ಸಂದರ್ಭದಲ್ಲಿ ಕರ್ನಾಟಕ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ, ನಮ್ಮ ರಾಷ್ಟ್ರವನ್ನು ಕಾಡುತ್ತಿರುವ ಸಾಮ್ರಾಜ್ಯಶಾಹಿ, ವಿಚ್ಛಿದ್ರಕಾರಕ ಶಕ್ತಿಗಳು ನಿರ್ಮೂಲವಾಗಬೇಕಾದರೆ, ಸಾಮ್ರಾಜ್ಯಶಾಹಿ ವಿರೋಧಿ, ಗುತ್ತೇದಾರಿ ವಿರೋಧಿ, ಪಾಳೆಯಗಾರಿ ವಿರೋಧಿ ಜನತಾ ಪ್ರಜಾಸತ್ತಾತ್ಮಕ ಚಳುವಳಿಯನ್ನು ಸಂಘಟಿಸದೆ ಅನ್ಯಮಾರ್ಗವಿಲ್ಲ ಎಂಬುದನ್ನು, ಈ ದಿಕ್ಕಿನಲ್ಲಿ ಕೆಲಸ ಮಾಡಲು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಬೆಸೆಯದೆ ಸಾಧ್ಯವಿಲ್ಲ ಎಂಬುದನ್ನು, ನಮ್ಮ ಶಕ್ತಿಯನ್ನು ಬೆಳೆಸಿಕೊಳ್ಳಲು ನಮ್ಮ ನೇತೃತ್ವದ ಸಾಮೂಹಿಕ ಸಂಘಟನೆಗಳನ್ನು ಬಲಪಡಿಸದೆ, ಪ್ರಜಾಸತ್ತಾತ್ಮಕ ಚಳುವಳಿಯ ಸಾರ್ವತ್ರಿಕ ವಾತಾವರಣವನ್ನು ನಿರ್ಮಿಸದೆ ಸಾಧ್ಯವಿಲ್ಲ ಎಂಬುದನ್ನು ನಾವೆಲ್ಲರೂ ಮನಗಾಣಬೇಕು ಮತ್ತು ಕಾರ್ಯೋನ್ಮುಖರಾಗಬೇಕು.

– ಜಿ. ಎನ್. ನಾಗರಾಜ್

ವಿಚಾರ ಸಂಕಿರಣ

ದಿನಾಂಕ 13-10-84 ರಂದು ಬಿ. ಎನ್. ಎಂ. ಕಾಲೇಜಿನಲ್ಲಿ ಪದವಿ ತರಗತಿಗಳಿಗೆ "ನಮ್ಮ ಶಿಕ್ಷಣ ಪದ್ಧತಿ" ಕುರಿತು ಎಸ್. ಎಫ್. ಐ. ನಿಂದ ವಿಚಾರ ಸಂಕಿರಣವನ್ನು ನಡೆಸಲಾಯಿತು. ಶಾಂತಕುಮಾರಿ ವಿಷಯದ ಕುರಿತು ಮಾತನಾಡಿದರು. ಹಿಂದಿನಿಂದ ಶಿಕ್ಷಣ ನಡೆದು ಬಂದ ರೀತಿ ಸಧ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಶಿಕ್ಷಣ ರಂಗದ ಕುರಿತು ಮತ್ತು ವೈಜ್ಞಾನಿಕ ಶಿಕ್ಷಣ ಪದ್ಧತಿ ಕುರಿತು ಮಾತನಾಡಿದರು.

ವೈಜ್ಞಾನಿಕದೃಷ್ಟಿಕೋನದ ಕುರಿತು ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ ಬೆನಕನ ಹಳ್ಳಿ ನಾಯಕರವರು ಮಾತನಾಡಿದರು.

ಸಂತಾಪ ಸೂಚನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಿಗೆ ಹಲವಾರು ವರ್ಷಗಳಿಂದ ಪ್ರೀತಿ ವಾತ್ಸಲ್ಯಪೂರ್ವಕ ಊಟೋಪಚಾರಗಳನ್ನು ನೀಡಿ ಪಾರ್ಟಿಯನ್ನು ಗೌರವ ಪೂರ್ವಕವಾಗಿ ನೋಡಿಕೊಂಡಿದ್ದ ಪೈವಳಿಕೆ ಕಲ್ಯಾಣಿ ಹೆಂಗ್ಸು ತನ್ನ 86 ನೇ ಪ್ರಾಯದಲ್ಲಿ 6-10-84 ರಂದು ಅಸುನೀಗಿದ್ದು ಪೈವಳಿಕೆ ಪಾರ್ಟಿ ಕಮಿಟಿ ಮೃತಳಿಗೆ ತನ್ನ ಸಂತಾಪ ವ್ಯಕ್ತಪಡಿಸಿದೆ. ಅವರ ಕುಟುಂಬದ ದುಃಖದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ಕಾರ್ಯಕರ್ತರು ಸಹಭಾಗಿಗಳಾಗಿದ್ದಾರೆಂದು ಮಂಜೇಶ್ವರ ಪಾರ್ಟಿ ಘಟಕದ ಕಾರ್ಯದರ್ಶಿ ಬಿ. ಎಂ. ರಾಮಯ್ಯ ಶೆಟ್ಟಿ ತಿಳಿಸಿದ್ದಾರೆ.

ಎನ್. ಎಲ್. ಉಪಾಧ್ಯಾಯರು ಆಸ್ಪತ್ರೆಯಲ್ಲಿ

ಸಿ. ಪಿ. ಐ. [ಎಂ]ನ ಹಿರಿಯ ಮುಖಂಡರಾದ ಕಾ. ಎನ್. ಎಲ್. ಉಪಾಧ್ಯಾಯರನ್ನು ಮಲ್ಲೇಶ್ವರಂ 17ನೇ ಕ್ರಾಸಿನಲ್ಲಿರುವ ಉಮಾ ನರ್ಸಿಂಗ್ ಹೋಮಿನಲ್ಲಿ ಸೇರಿಸಲಾಗಿದೆ. ಕಳೆದ 8—10 ದಿನಗಳಿಂದ ಅವರಿಗೆ ಊಟ ಸೇರುತ್ತಿಲ್ಲ, ಅಷ್ಟೇ ಅಲ್ಲ ಕಳೆದ 2 ದಿವಸಗಳಿಂದ ಮೂತ್ರ ವಿಸರ್ಜನೆಗೆ ತೊಂದರೆಯಾಗುತ್ತಿದೆ. ಡಾಕ್ಟರರು ತಪಾಸಣೆ ನಡೆಸುತ್ತಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560052 Editoral and managerial office, L-56, K. V. Temple Street, Sultanpet. B-53 Phone: 24154
Editor: P. Ramachandra Rao
Managing Editor: N. K. Upadhyaya